(ಸಭೆಯು ಮಧ್ಯಾಹ್ನ 2 ಘಂಟೆಗೆ ಪುನಃ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಬಜೆಟನ್ನು ಸದನದಲ್ಲಿ ಮಂಡಿಸುವುದಕ್ಕಿಂತ ಮೊದಲೆ ಬಹಿರಂಗವಾಗಿರುವ ಬಗ್ಗೆ ಚರ್ಚೆ.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, ಎರಡು ಗಂಟೆಗೆ ಬಜೆಟ್ ಇಲ್ಲಿ ಮಂಡನೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ.....

ಶ್ರೀ ಕೆ.ಹೆಚ್. ರಂಗನಾಥ್:- ಅದು ಒಂದು ಅನಾಹುತ ಇಲ್ಲಿ ಆಗಿರುವುದರಿಂದ ಈ ಕಾರ್ಯಕ್ರಮವನ್ನು ತಾವು ನಿಲ್ಲಿಸುವುದು ಒಳ್ಳೆಯದೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತಿದ್ದೇನೆ. ನಾವು ಈಗ ಕಾಫಿ ಲೌಂಜ್‌ನಲ್ಲಿದ್ದೆವು. ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಸೇರಿದ ಕೆಲವು ಸಣ್ಣ ಅಧಿಕಾರಿಗಳು ಅದನ್ನು ಹಂಚುತ್ತಿದ್ದರು. ನನಗೂ ಕೂಡ ಒಂದು ಕಾಪಿ ಕೊಟ್ಟರು.

(ಗೊಂದಲ)

MR. SPEAKER:- Would you kindly bear with me...

(ಗೊಂದಲ)

MR. SPEAKER:- Would you kindly bear with me...

ಅಧ್ಯಕ್ಷರು: ನಾನು ಹೇಳುವುದನ್ನು ಸ್ವಲ್ಪ ಕೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಆಯವ್ಯಯ ಸುಮಾರು ಮೂರು ಘಂಟೆ ಮುಂಚಿತವಾಗಿ ಇದು ಹೊರಗಡೆ ಬಂದಿದೆ. ಇದು ರಾಜ್ಯದ ಜನತೆಗೆ ಈಗಾಗಲೇ ಗೊತ್ತಾಗಿದೆ. ಇದರ ಮಧ್ಯೆ ಖಂಡಿತವಾಗಿ ಹೇಳುತ್ತೇನೆ, ಈಗ ಮಾನ್ಯ ಮುಖ್ಯಮಂತ್ರಿಗಳು ಇದನ್ನು ಓದಿದರೆ ಈ ಸಭೆಯಲ್ಲಿ ಎರಡನೇ ಬಜೆಟ್ ಓದಿದಹಾಗೆ ಆಗುತ್ತದೆ.

(ಗೊಂದಲ)

ಅಧ್ಯಕ್ಷರು:- ದಯವಿಟ್ಟು ಕುಳಿತುಕೊಳ್ಳಬೇಕು, ಸ್ವಲ್ಪ, ದಯವಿಟ್ಟು ಕುಳಿತುಕೊಳ್ಳಬೇಕು. ಮಾನ್ಯ ಸದಸ್ಯರಾದ ಶ್ರೀರಂಗನಾಥರವರು ನನಗೆ ಆಯವ್ಯಯ ಪತ್ರದ ಭಾಷಣದ ಒಂದು ಕಾಪಿಯನ್ನು ಕಳುಹಿಸಿಕೊಟ್ಟಿದ್ದಾರೆ. ಇದು 1992-93ನೇ ಇಸವಿಗೆ ಸಂಬಂಧಪಟ್ಟದ್ದು. ಇದು ನಿಮ್ಮ ಕೈಗೆ ಎಷ್ಟು ಹೊತ್ತಿಗೆ ಬಂತು?

ಶ್ರೀ ಕೆ.ಹೆಚ್. ರಂಗನಾಥ್:- 15 ನಿಮಿಷ ಮುಂಚೆ ಬಂತು.

(ಗೊಂದಲ)

MR.SPEAKER: Let us hear the Chief Minister.....

(INTERRUPTIONS)

MR.SPEAKER:- May I ask the Marshal to clear the Photographers.

(INTERRUPTIONS)

MR.SPEAKER:- I am on my legs. Photographers to be cleared.

(INTERRUPTIONS)

MR. SPEAKER:- Budget is too serious a matter and it is much too solemn. There is also what is known as secrecy and until the House assembles, if somebody has the audacity or takes the authority to distribute what is supposed to be the

Budget Speech of the Finance Minister, it is a very serious matter which just cannot be brushed aside. I would like to hear the Hon'ble Chief Minister.

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಯವರು):- ಮಾನ್ಯ ಸಭಾಧ್ಯಕ್ಷರೆ, ಆಯವ್ಯಯ ಪತ್ರವನ್ನು ಮಂಡನೆ ಮಾಡುವುದಕ್ಕೆ ಮೊದಲು ಅದರ ಪಾತ್ರ ಏನು, ಪ್ರಾಮುಖ್ಯತೆ ಏನು ಎನ್ನತಕ್ಕಂಥ ವಿಚಾರದ ಅರಿವು ಸಂಪೂರ್ಣ ಸರ್ಕಾರಕ್ಕೆ ಇದೆ. ತಾವು ಹೇಳತಕ್ಕಂಥಾದ್ದನ್ನು ನಾನು ಸಂಪೂರ್ಣವಾಗಿ ಅನುಮೋದನೆ ಮಾಡುತ್ತೇನೆ. ತಮಗೆ ಗೊತ್ತಿರುವ ಹಾಗೆ, ಸಂಪ್ರದಾಯದಂತೆ ನಾವು ಡಿಸ್ಟ್ರಿಬ್ಯೂಷನ್‌ಗೋಸ್ಕರ ಲಿಜಿಸ್ಲೇಟರ್ ಸೆಕ್ರೆಟರಿಯೇಟ್‌ಗೆ ಅದನ್ನು ಕಳುಹಿಸಿಕೊಡುತ್ತೇವೆ. ಅದು ಬಿಟ್ಟರೆ ಸರ್ಕಾರದ ಮತಿಯಿಂದ ಯಾವುದೂ ಕೂಡ, ಕಿಂಚಿತ್ತು ಕೂಡ ಹೋಗಿಲ್ಲ I have taken care to see that it is not at all leaked out before the same is presented in the House.

ಅದಕ್ಕೋಸ್ಕರ ಇವತ್ತು ಕೊಡತಕ್ಕಂಥ ಸಂದರ್ಭದಲ್ಲಿ ಬುಕ್ಸ್ ಇಲ್ಲೇ ಇವೆ, ಎದುರಿಗೇ ಇವೆ. ಅವು ತಮಗೆ ಹಂಚುವುದಕ್ಕೆ ಇವೆ. ಅದರ ಒಂದು ಕಾಪಿ ಅವರ ಕೈಗೆ ಇಲ್ಲೇ ಸಿಕ್ಕಿರಬಹುದು.

ಸದನದ ಪ್ರಿಸೆನ್ಸ್‌ನಲ್ಲಿ ಇಲ್ಲೇನೆ ಸಿಕ್ಕಿರಬಹುದು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಾನು ಹೇಳುವುದೇನೆಂದರೆ, ಪ್ರಿಸೆನ್ಸ್ ಎಂದರೆ ಹೊರಗಡೆ ಎಂದು ಆ ಅರ್ಥಕ್ಕೆ ನಾನು ಮಾತನಾಡುತ್ತಿಲ್ಲ. ಇಲ್ಲೇ ಇವೆ. ತಮ್ಮ ಕಣ್ಣ ಮುಂದೆ ಎಲ್ಲಾ ಕಾಪಿಗಳನ್ನು ಇಡಲೇಬೇಕು. ಮಾನ್ಯ ಸದಸ್ಯರುಗಳಿಗೆ, ಸದನದ ಎಲ್ಲಾ ಸದಸ್ಯರಿಗೆ ಕೊಡುವುದಕ್ಕೋಸ್ಕರ. ಹಾಗೆ ಇಟ್ಟಿರತಕ್ಕಂಥ ಸಂದರ್ಭದಲ್ಲಿ ಎಲ್ಲಾ ಲೂಸ್ ಆಗಿ ಇಲ್ಲೇ ಇದ್ದಾವೆ. ಏಕೆಂದರೆ, ಅವುಗಳನ್ನು ಇಡಲೇಬೇಕು. ತಮ್ಮ ಕಾಲದಲ್ಲೂ ಹಾಗೇ ಇಡುವುದು, ನಮ್ಮ ಕಾಲದಲ್ಲೂ ಹಾಗೆ ಇಡುವುದು. ಆ ದೃಷ್ಟಿಯಿಂದ ಒಂದು ಕಾಪಿ ಮಾನ್ಯ ಸದಸ್ಯರ ಕೈಗೆ ಸಿಕ್ಕಿರಬಹುದು. ಅದು ಯಾವ ಕಾರಣಕ್ಕೋ ನನಗೆ ಗೊತ್ತಿಲ್ಲ. ಅದನ್ನು ವಿಚಾರಣೆ ಮಾಡುತ್ತೇವೆ; ವಿನಃ ಅದರೆ ಒಂದು ವಿಷಯ. ಸದನಕ್ಕೆ ಅಂದರೆ ಇಲ್ಲಿ ಬಂದ ಮೇಲೆ ಅವರು ಹೇಳಿದ ಪ್ರಕಾರ, ಇಲ್ಲಿ ಸಿಕ್ಕಿದೆ ಎಂದರೆ, ಹೊರಗಡೆ ಯಾವುದೇ ವಿಚಾರ ಹೋಗಿಲ್ಲ. ಆ ಸೀಕ್ರೆಸಿಯನ್ನು ನಾವು ಮೇನ್‌ಟೇನ್ ಮಾಡಿದ್ದೇವೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ: ಮಾನ್ಯ ವಿರೋಧ ಪಕ್ಷದ ನಾಯಕರನ್ನು ವಿನಂತಿ ಮಾಡುತ್ತೇನೆ. ಒಂದು ನಿಮಿಷ..

SRI D.B. CHANDRE GOWDA:- I would like to know what is the sanctity of the Budget...

ಶ್ರೀ ಎಸ್. ಬಂಗಾರಪ್ಪ:- ನಾನು ಸಂಪೂರ್ಣ ಹೇಳುತ್ತೇನೆ. ಮಾನ್ಯ ಸಭಾಧ್ಯಕ್ಷರೆ, ಅದು ಹೊರಗಡೆ ಜನರಿಗೆ ಸಿಕ್ಕಿತು ಎನ್ನತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರಾದ ರಂಗನಾಥ ಜೀಯವರು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ, ಅವರೇ ಹೇಳಿದ ಪ್ರಕಾರ, ಈಗ ಇಲ್ಲಿ ಸಿಕ್ಕಿದೆ ಎನ್ನತಕ್ಕಂಥ ಮಾತು. ಆದುದರಿಂದ ಯಾವ ಸೀಕ್ರೆಸಿಯನ್ನು ಮೇನ್‌ಟೇನ್ ಮಾಡಬೇಕಾಗಿತ್ತೋ ಅದನ್ನು ಸಂಪೂರ್ಣವಾಗಿ ಮೇನ್‌ಟೇನ್ ಮಾಡಲಾಗಿದೆ. ತಾವು ದಯವಿಟ್ಟು ಅದನ್ನು ಓದುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡುತ್ತೇನೆ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ರಂಗನಾಥ್‌ರವರು, ಹೇಳಿದರು ಅವರಿಗೆ ಲಾಂಜ್‌ನಲ್ಲಿ ಬಜೆಟ್ ಕಾಪಿ ಸಿಕ್ಕಿದೆ ಎಂದು. He has got the copy outside... Copies have not been distributed here. It is a breach of privilege.....

ಶ್ರೀ ಬಿ.ಹೆಚ್. ಬನ್ನಿಕೋಡ್:- ಮಾನ್ಯ ರಂಗನಾಥರವರು ಬಜೆಟ್ ಪ್ರತಿಗಳನ್ನು ಅಲ್ಲಿ ಹಂಚಿದ್ದಾರೆ ಎಂದು ಹೇಳುತ್ತಿದ್ದಾರೆ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ರಂಗನಾಥರವರು ಆ ಬಜೆಟ್ ಪ್ರತಿ ಎಲ್ಲಿಂದ ಬಂತು ಎಂದು ಹೇಳಬೇಕು, ಯಾರು ಕೊಟ್ಟರು ಎಂದು ಹೇಳಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಲಾಂಜ್‌ನಲ್ಲಿ ಅಂದರೆ ಈ ಲಾಬಿ ಕೂಡ ಅದಕ್ಕೆ ಸೇರಿದೆ. ಈ ಸದನ ಅಂದರೆ ಈ ಲಾಬಿ ಕೂಡ ಅದಕ್ಕೆ ಸೇರಿರತಕ್ಕಂಥಾದ್ದು. Definition of the House ಎನ್ನುವುದಕ್ಕ Precincts ಕೂಡ ಇದೆ. ಆದ್ದರಿಂದ ಅವರು ಬಾಯಿ ಮಾತಿನಿಂದ ಹೇಳುವುದಾದರೆ, ಅದನ್ನು ಅವರು ತೆಗೆದುಕೊಂಡಿರುವುದು ಲಾಬಿಯೊಳಗೆ it comes within the purview of the Legislative Assembly..

ಆ ದೃಷ್ಟಿಯಿಂದ ಅಲ್ಲಿ ಬುಕ್ ಕೊಟ್ಟಿದ್ದರೂ ಕೂಡ ಈ ಸದನಕ್ಕೆ ಅವರು ಬಂದು ಕುಳಿತಾಗಿ ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಗೆ ಬಂದ ಮೇಲೆ. ಆದ್ದರಿಂದ ಪ್ರತಿಗಳು ಲೀಕ್ ಔಟ್ ಆಗಲಿಲ್ಲ. ಆದ್ದರಿಂದ ತಾವು ದಯಮಾಡಿ ಬಜೆಟ್ ಮಂಡನೆಗೆ ಅವಕಾಶ ಮಾಡಿಕೊಡಬೇಕು.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ:- ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮುಖ್ಯಮಂತ್ರಿಯವರು ವಿಚಾರವನ್ನು ಸಭೆಯಲ್ಲಿ ಈಗಾಗಲೇ ಹೇಳಿದ್ದಾರೆ. ಇಷ್ಟಾದರೂ ಕೂಡ ಇವರು ವಿರೋಧ ಮಾಡತಕ್ಕಂಥಾದ್ದನ್ನು ನೋಡಿದರೆ ಇದರೊಳಗೆ ನೇರವಾಗಿ ವಿರೋಧ ಪಕ್ಷದವರ ಪಿತೂರಿ ಇದೆ ಎಂದು ನಮ್ಮ ಅನಿಸಿಕೆ.

(ಗೊಂದಲ)

MR. SPEAKER:- Let us hear the Parliamentary Affairs Minister. I have called Mr. Moily, Parliamentary Affairs Minister....

SRI M.VEERAPPA MOILY:- Hon'ble Member Sri Rangnath raised a point of order. I would like to submit on that..

ಸನ್ಮಾನ್ಯ ಅಧ್ಯಕ್ಷರೇ, ಇಲ್ಲಿ ನಾವು ಎರಡು ಗಂಟೆಗೆ ಬಜೆಟ್ ಮಂಡನೆಗೆ ಸೇರಬೇಕಾದುದು.

ಇಲ್ಲಿ ಬರತಕ್ಕಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಅರ್ಥ ಸಚಿವರಾಗಿ ಬಜೆಟ್ ಮಂಡನೆ ಮಾಡಲಿಲ್ಲ. ಆ ಸಂದರ್ಭದಲ್ಲಿ ತಾವು ಸನ್ಮಾನ್ಯ ಮುಖ್ಯ ಮಂತ್ರಿಯವರನ್ನು ಅರ್ಥ ಸಚಿವರಾಗಿ ಬಜೆಟ್ ಮಂಡನೆ ಮಾಡಬೇಕೆಂದು ಹೇಳಿ, ತಾವು ಕರೆಯನ್ನು ನೀಡಿದ್ದೀರಿ. ಕರೆಯನ್ನು ನೀಡಿದ ಮೇಲೆ ಬಜೆಟ್ ಮಂಡನೆ ಮಾಡಲಿಕ್ಕೆ ಸನ್ಮಾನ್ಯ ಮುಖ್ಯ ಮಂತ್ರಿಯವರು....

(ಗೊಂದಲ)

SRI M. VEERAPPA MOILY:- Hon'ble Speaker has already permitted. ತಾವು ಅನುಮತಿಯನ್ನು ಕೊಟ್ಟಿದ್ದೀರಿ. ಅನುಮತಿಯನ್ನು ಸನ್ಮಾನ್ಯ ಮುಖ್ಯ ಮಂತ್ರಿಗಳಿಗೆ ಕೊಟ್ಟಾಗ ಅವರು ಎದ್ದು ನಿಂತು ಬಜೆಟ್ ಮಂಡಣೆಯನ್ನು ಪ್ರಾರಂಭ ಮಾಡುವಷ್ಟರಲ್ಲಿ ಹಿರಿಯ ಸದಸ್ಯರಾದಂಥ....

(ಗೊಂದಲ)

SRI M. VEERAPPA MOILY:- I am on my legs. You can submit afterwards

ಅಧ್ಯಕ್ಷರು:- ಸಾಂಸಧಿಕ ವ್ಯವಹಾರಗಳ ಚೌಕಟ್ಟಿನಲ್ಲಿ ನಾವು ಇದನ್ನು ತೀರ್ಮಾನ ಮಾಡಬಹುದು.

(ಗೊಂದಲ)

SRI M.VEERAPPA MOILY:- I have been permitted by the Hon'ble Speaker..

(INTERRUPTIONS)

SRI M. VEERAPPA MOILY:- You can submit afterwards. If I am misleading it is for the Chair to correct. I am available for correction. According to my

understanding, we are just sitting here, the Chief Minister came and you came over, then you have called the Chiefm Minister to present the Budget. Then, the Chief Minister was about to open up and before he could open for reading the Budget Speech; when he was about to open, then the Hon'ble Senior Member Mr. Ranganath raised this objection. The Converntion of this House,- I was also the Finance Minister here presented three Budgets,- before it is presented by the Finance Minister the copies for circulation to this House- these copies are given to the Legislature Secretariat one hour earlier or some time earlier. The copies are definitely, the budget copies have been given to the Legislature Department very much earlier and that has been the convention.

ಸನ್ಮಾನ್ಯ ಸದಸ್ಯರ ಅಭಿಪ್ರಾಯ ಏನೆಂದರೆ, ಪ್ರತಿಯು ನನಗೆ ಈಗ ಲಾಂಜ್‌ನಲ್ಲಿ ಸಿಕ್ಕಿತು ಎಂದು ಹೇಳಿದ್ದಾರೆ. ಈ ಬಜೆಟ್ ಪ್ರತಿ ಮಾರ್ಕೆಟ್ ನಲ್ಲಿ ಸಿಕ್ಕಿದೆ ಅಥವಾ ಹೊರಗಡೆ ಸಿಕ್ಕಿದೆ. ಕೆಲವು ಗಂಟೆಗಳ ಹಿಂದೆ ಸಿಕ್ಕಿದೆ ಎಂಬ - ವಾದವನ್ನು ಯಾರೂ ಹೇಳುತ್ತಾ ಇಲ್ಲ, ಇದು ಕೆ.ಹೆಚ್. ರಂಗನಾಥರವರು ಹೇಳತಕ್ಕಂಥ ಮಾತೂ ಅಲ್ಲ. ಈ ವಿಧಾನ ಸಭೆಯಲ್ಲಿ ಸಿಕ್ಕಿದೆ. Lounge is also the precinct of the House. It has been found there..

Let me submit the facts. I am on my legs.

ಪರಂಪರೆ ಪ್ರಕಾರ ಶಾಸಕಾಂಗಕ್ಕೆ ಒಂದು ಗಂಟೆ ಅಥವಾ ಕೆಲವು ಕಾಲದ ಮೊದಲು ಪ್ರತಿಯನ್ನು ಕೊಡತಕ್ಕ ಸಂಪ್ರದಾಯವನ್ನು ಮೊದಲಿಂದಲೂ ನಾವು ನಡೆಸಿಕೊಂಡು ಬಂದಿದ್ದೇವೆ. ಹಾಗೆ ನಡೆಸಿಕೊಂಡು ಬಂದಮೇಲೆ ಈ ಶಾಸಕಾಂಗದ ಪರಿಸರಕ್ಕೆ ಈ ಪ್ರತಿಗಳನ್ನು ಕೊಟ್ಟಾಗ ಅಲ್ಲಿ ಅದು ಕೆಲವು ನಿಮಿಷಗಳ ಮೊದಲು ಅದು ಸರ್ಕ್ಯುಲೇಶನ್ ಮಾಡುತ್ತಾರೆ. ಎದ್ದುನಿಂತ ಕೂಡಲೇ ಒಂದು ಶಬ್ದ ಓದುವ ಮೊದಲೆ ಸರ್ಕ್ಯುಲೇಶನ್‌ಗೆ ಹೊರಟುಹೋಗುತ್ತದೆ. ಅದನ್ನು ನಾವು ನಿಲ್ಲಿಸಿದೆವು. ಅಧ್ಯಕ್ಷರೇ, ಅವರು ಎದ್ದು ನಿಂತ ಕೂಡಲೇ ಪ್ರತಿಗಳನ್ನು ಹಂಚಲಿಕ್ಕೆ ಇವರು ಪ್ರಾರಂಭ ಮಾಡಿಬ್ಬಾರೆ. ಏಕೆಂದರೆ, ಅದು ಸಂಪ್ರದಾಯದ ಪ್ರಕಾರ. ಏಕೆಂದರೆ, ಒಂದು ಶಬ್ದ ಓದುವ ಮೊದಲೂ ಕೂಡ ಬಜೆಟ್ ಪ್ರತಿಗಳು ಸದಸ್ಯರ ಕೈಗೆ ಬಂದರೆ ಅದು ದೊಡ್ಡ ಅನಾಹುತ ಎಂದು ಇಲ್ಲಿಯವರೆಗೂ ನಾವು ತೆಗೆದುಕೊಂಡಿಲ್ಲ, ಇವತ್ತು ಅನಾಹುತ ಎಂದು ನಾವು ತೆಗೆದುಕೊಂಡಿದ್ದೇವೆ. That is a different matter. ಆದರೆ ಐದು ಅಥವಾ ಎರಡು ನಿಮಿಷದ ಮೊದಲು ವಿಧಾನಸಭೆಯ ಒಳಗಡೆ ಅಥವಾ ಆವರಣದಲ್ಲಿ ಒಂದು ಪ್ರತಿ ಸಿಕ್ಕಿದರೆ ಅದು ಮೊದಲಾಗಿ ಹೇಗೆ ಬಂತು ಎಂಬ ವಿಚಾರ ತಮ್ಮ ವಿಚಾರಣೆಗೆ, ತಮ್ಮ ಇಲಾಖೆಗೆ ಬಿಟ್ಟಂಥ ವಿಚಾರ. ಆದರೆ ನಮ್ಮ ಸರ್ಕಾರದ ಮತಿಯಿಂದ ಅಥವಾ ಮುಖ್ಯಮಂತ್ರಿಗಳ ಅರ್ಥಶಾಖೆಯ ಮತಿಯಿಂದ ಒಂದು ಪ್ರತಿ ಕೂಡ ಹೊರಕ್ಕೆ ಎಲ್ಲೂ ಹೋಗಿಲ್ಲ, ಅದು ಪ್ರಚಾರ ಕೂಡ ಆಗಿಲ್ಲ, ಅದು ಲೀಕ್‌ಕೌಟ್ ಕೂಡ ಆಗಿಲ್ಲ. ಆದರೆ ಒಂದು ವೇಳೆ ಯಾವುದೋ.....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ನಾವು ಈ ವಿಧಾನಮಂಡಲದಲ್ಲಿ ಪ್ರತಿಯನ್ನು ಅಡ್ವಾನ್ಸಾಗಿ .....

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಇನ್ನು ಮುಂದೆ ಸನ್ಮಾನ್ಯ ಮುಖ್ಯಮಂತ್ರಿಗಳು ಅಥವಾ ಅರ್ಥ ಸಚಿವರು ಬಜೆಟ್ ಭಾಷಣ ಓದಿದ ಮೇಲೆಯೇ ಅದರ ಪ್ರತಿಗಳನ್ನು ಶಾಸಕಾಂಗಕ್ಕೆ ಹಂಚಬೇಕಾದರೆ ಆ ಆದೇಶಕ್ಕೆ ನಾವು ಬದ್ಧರಾಗಿದ್ದೇವೆ. ಆದರೆ ಪರಂಪರಾಗತವಾಗಿ ಹಲವಾರು ವರ್ಷಗಳಿಂದ ನಡೆದು ಬಂದ ಕನ್‌ವೆನ್‌ಶನ್‌ಅನ್ನು, ಪರಂಪರೆಯನ್ನು ನಮ್ಮ ಸರ್ಕಾರ ಅನುಸರಿಸಿಕೊಂಡು ಬಂದಿದೆ. ಆದರೆ ಈ ಮಧ್ಯೆ ಎಲ್ಲಾದರೂ ಒಂದೆರಡು ನಿಮಿಷಗಳಲ್ಲಿ ಆ ಲೌಂಜ್‌ನಲ್ಲಿ ಅಥವಾ ಇಲ್ಲಿ ಎಲ್ಲಿ ಪ್ರತಿ ಸಿಕ್ಕಿದರೆ ಆದಕ್ಕೆ ಅರ್ಥಮಂತ್ರಿಗಳಾಗಲೀ ನಾವಾಗಲೀ ಅಥವಾ ಸರ್ಕಾರವಾಗಲೀ, ನಾವು ಯಾವ ರೀತಿಯ ಲೋಪವನ್ನೂ ನಾವು ಮಾಡಿಲ್ಲ, ತಾಂತ್ರಿಕವಾದ ಅಂದರೆ ಬಜೆಟ್ ಲೀಕ್ ಆಗುವಂಥಾದ್ದು ಗಂಭೀರವಾದ ವಿಚಾರ. ಅದನ್ನು ನಾವು ಒಪ್ಪೇವೆ. ಆದರೆ ಈ ಬಜೆಟ್ ಪ್ರತಿ ಹೊರಗೆ ಪ್ರಚಾರ ಆಗಿದ್ದರೆ ಅದು ಸರಿ ಆದರೆ ಇದು ಪ್ರತಿಯನ್ನು ಹಂಚಿತಕ್ಕ ಸಮಯದಲ್ಲಿ ಏನಾದರೂ ಲೋಪವಾಗಿದ್ದರೆ ಅದು ವಿಶೇಷವಾದಂಥ ಪಾರ್ಲಿಮೆಂಟ್ ಪರಂಪರೆಗೆ ವಿರುದ್ಧವಾದ ಒಂದು ಪದ್ಧತಿ ಆಗುವುದಿಲ್ಲ

ಎಂಬುದನ್ನು ತಮ್ಮ ಗಮನಕ್ಕೆ ತಂದು, ಇನ್ನು ಮುಂದೆ ತಾವು ಆದೇಶ ಕೊಟ್ಟರೆ, ಈ ಪ್ರತಿಗಳನ್ನು ಅರ್ಥಮಂತ್ರಿಗಳು ಭಾಷಣ ಮಾಡಿದ ಮೇಲೆಯೇ ಹಂಚತಕ್ಕ ಒಂದು ಪರಿಪಾಠ ಇಟ್ಟುಕೊಳ್ಳುವುದಕ್ಕೆ ನಮ್ಮ ಅಡ್ಡಿ ಇಲ್ಲ, ಆದರೆ ಮೊದಲಿಂದಲೂ ಕನ್‌ವೆನ್‌ಶನ್ ಪ್ರಕಾರ ನಡೆಯಬೇಕಾದರೆ ಶಾಸಕಾಂಗದಲ್ಲಿ ಕೂಡ ಸರಿಯಾಗಿ ಒಟ್ಟಿನಲ್ಲಿ, ಯಾವ ಸಮಯದಲ್ಲಿ ಇದನ್ನು ಹಂಚಬೇಕೆಂದು ನಿರ್ಣಯ ಮಾಡುವಂಥಾದ್ದು ಅದು ತಮ್ಮ ಅಧಿಕಾರ ವ್ಯಾಪ್ತಿಗೆ ಸೇರಿದೆಯೇ ಹೊರತು ನಮ್ಮ ಅರ್ಥ ಮಂತ್ರಿಗಳ ಅಥವಾ ಸರ್ಕಾರದ ವ್ಯಾಪ್ತಿಗೆ ಸೇರಿರತಕ್ಕದ್ದಲ್ಲ. ಆದ್ದರಿಂದ ಏನು ಒಂದು ಪಾಯಿಂಟ್ ಆಫ್ ಆರ್ಡರ್ ಅನ್ನು ಹಿರಿಯ ಸದಸ್ಯರಾದ ರಂಗನಾಥರವರು ಎತ್ತಿದ್ದಾರೆ ಅದು ಸರ್ಕಾರಕ್ಕೆ, ಸರ್ಕಾರದ ಒಳಗೆ ಬಂದಂಥ ಲೋಪದ ವ್ಯಾಪ್ತಿಗೆ ಬರುವುದಿಲ್ಲ. ಆ ಲೋಪದ ವ್ಯಾಪ್ತಿ ಶಾಸಕಾಂಗದ ಇಲಾಖೆಯ ವಿಚಾರದಲ್ಲಿ ಅದು ಹಂಚುವ ವ್ಯವಸ್ಥೆಯಲ್ಲಿ ಏನಾದರೂ ಹೆಚ್ಚು ಕಡಿಮೆ ಆಗಿದ್ದರೆ ಅದನ್ನು ಬಹಳ ಬೆಳೆಸಿಕೊಂಡು ಅದನ್ನೇ ಒಂದು ಗಂಭೀರವಾದ ಪರಿಸ್ಥಿತಿಗೆ ತರುವುದು ಯೋಗ್ಯವಲ್ಲ ಎಂದು ತಮ್ಮ ಹತ್ತಿರ ಮನವಿ ಮಾಡಿಕೊಳ್ಳುತ್ತೇನೆ.

(ಗೊಂದಲ)

MR. SPEAKER:- Order, I have called Sri Ranganath.

ಶ್ರೀ ಕೆ.ಹೆಚ್. ರಂಗನಾಥ್:- ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು:- ಈಗ ಸಂಸದೀಯ ವ್ಯವಹಾರಗಳ ಸಚಿವರು ನಿಂತಿದ್ದಾಗಲೂ ಕೂಡ ಅವರು ನನ್ನ ಗಮನ ಸೆಳೆದರು. ಅವರು ಈಗ ಏನು ಹೇಳುತ್ತಾರೊ ಕೇಳೋಣ, ಆಮೇಲೆ ನಿಮ್ಮನ್ನು ನಾನು ಕರೆಯುತ್ತೇನೆ. ಅವರು ಅಂತಿಮವಾಗಿ ಹೇಳುವುದಲ್ಲ, ಅಂತಿಮವಾಗಿ ನಾನು ಹೇಳುತ್ತೇನೆ. ಅವರು ಪ್ರಾರಂಭಿಕವಾಗಿ ಹೇಳಲಿ, ಆಮೇಲೆ ನಿಮ್ಮನ್ನೂ ಕೇಳಿ ಅನಂತರ ಅಂತಿಮವಾಗಿ ನಾನು ಹೇಳುತ್ತೇನೆ. .

ಶ್ರೀ ಕೆ.ಹೆಚ್. ರಂಗನಾಥ್:- ಸನ್ಮಾನ್ಯ ಅಧ್ಯಕ್ಷರೇ, ಇದು ಬಹಳ ಗಂಭೀರವಾದ ಪ್ರಶ್ನೆ ಇವತ್ತು ಉದ್ಭವವಾಗಿದೆ.

(ಗೊಂದಲ)

ಅಧ್ಯಕ್ಷರು:- ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ನಾನು ಭರವಸೆ ಕೊಡುತ್ತೇನೆ. ನಾನು ಒಂದು ಸಾರಿ ಅವರನ್ನು ಕರೆದ ಮೇಲೆ ನೀವು ಎಷ್ಟು ಜನ ಎದ್ದುನಿಂತರೂ ಕೂಡ ನಾನು ಅವರನ್ನು ಕೂರಿಸುವುದಿಲ್ಲ. ಆದ್ದರಿಂದ ನೀವು ಹೇಳಬೇಕೆಂದರೆ ನಿಮಗೂ ಅವಕಾಶ ಕೊಡ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್:- ನಮ್ಮ ಪಕ್ಷದ ಹಲವು ಮಿತ್ರರು, ಅದರಲ್ಲೂ ಕಾಗೋಡು ತಿಮ್ಮಪ್ಪನವರು ಬಹಳ ದಿವಸದಿಂದ ಈ ಸಭೆಯಲ್ಲಿದ್ದಾರೆ. ಮಾನ್ಯ ಸದಸ್ಯರು ಏನು ತಿಳಿದುಕೊಂಡಿದ್ದಾರೆಂದರೆ, ನಾನೇನು ಇದನ್ನು ರಾಜಕೀಯ ಮಾಡುವುದಕ್ಕೆ ಪ್ರಯತ್ನ ಪಟ್ಟಿದ್ದೇನೆಂದು ತಿಳಿದುಕೊಂಡಿದ್ದಾರೆ.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:- ಆದರೆ ವಾಸ್ತವಾಂಶ ಏನೆಂದರೆ ತಾವು ಅಧ್ಯಕ್ಷರಾಗಿರುವಾಗ ಇದು ಹೇಗೋ ಆಗಿದೆ. ಆದರೆ ಕಾನೂನಿಗೆ ಬಾಹಿರವಾದ ಕೆಲಸ ಈ ಸದನದಲ್ಲಾಗಬಾರದು. ತಾವು ಅಧ್ಯಕ್ಷರಾಗಿದ್ದಾಗ ಇದು ಆಗಬಾರದು ಎಂದು ಹೇಳಿ ನನ್ನ ಗಮನಕ್ಕೆ ಬಂದದ್ದನ್ನು ನಾನು ಎತ್ತಿಕೊಂಡು ಬಂದು ತಾವು ಕರೆಯುವ ಮುಂಚೆ ವಿನಂತಿಮಾಡಿಕೊಂಡಿದ್ದೇನೆ ಇದು ಆಗಬಾರದು ಸ್ವಾಮಿ, ಇದನ್ನು ನಿಲ್ಲಿಸಿರಿ, ನಿಲ್ಲಿಸುವುದರಿಂದ ಈ ಸದನಕ್ಕೆ ಒಳ್ಳೆಯದಾಗುತ್ತದೆ. ಒಳ್ಳೆಯ ಸಂಪ್ರದಾಯ ಆಗುತ್ತದೆಂಬ ದೃಷ್ಟಿಯಿಂದ ಹೇಳಿದ್ದೇನೆ. ಅದರ ತೀರ್ಮಾನ ತಮಗೆ ಬಿಟ್ಟಿದ್ದು. ಬಜೆಟ್ ಅನ್ನು ಮಂಡಿಸುವುದಕ್ಕೆ ಅವಕಾಶ ಕೊಡಬೇಕೇ ಕೊಡಬಾರದೇ, ಪ್ರಿಂಕ್ಡ್ ನಲ್ಲಿ ಆಗಿದೆಯೇ ಆಗಿಲ್ಲವೇ ಹ್ಯಾಗೇ ಎಂಬುದು ತಮ್ಮ ವಿವೇಚನೆಗೆ ಬಿಟ್ಟಿದ್ದು. ಘಟನೆ ಏನೋ ನಡೆಯಿತು. Just facts, not beyond that. ಏನು ವಾಸ್ತವಾಂಶ ನಡೆಯಿತು ಅಷ್ಟನ್ನು ಮಾತ್ರ ಈ ಸಭೆಯ ಮುಂದಿಟ್ಟು ತಮ್ಮ ಗಮನಕ್ಕೆ ತರುತ್ತಿದ್ದೇನೆ ಅಷ್ಟೆ. ಅದಕ್ಕಿಂತ ಬೇರೇನೂ ಇಲ್ಲ. ಲಾಂಜ್‌ನಲ್ಲಿ ನಾನು ನನ್ನ ಸ್ನೇಹಿತರು ಕುಳಿತಿದ್ದೆವು. ತಾವು ಅಡ್ವರ್ಟ್‌ಮೆಂಟ್ ಮಾಡಿಹೋದ ಮೇಲೆ ನಾನು ಎಲ್ಲೂ ಮನೆಗೆ ಹೋಗಲಿಲ್ಲ. ಇಲ್ಲೇ ಕುಳಿತುಕೊಂಡು ಮಾತನಾಡುತ್ತಿದೆ. ಅಷ್ಟು ಹೊತ್ತಿಗೆ ಮಾನ್ಯ ಯಾಹ್ಯಾ ಅವರು ಬಂದರು, ಮಾನ್ಯ ರಾಜಶೇಖರಮೂರ್ತಿಯವರೂ ಬಂದರು. ನಾನೂ ಡಾಕ್ಟರ್ ಪಕ್ಕದಲ್ಲಿ ಕುಳಿತುಕೊಂಡಿದ್ದೆ. ಇನ್ನೂ ಕೆಲವರು ಪಕ್ಕದಲ್ಲಿ ಕುಳಿತುಕೊಂಡಿದ್ದರು. ನಮ್ಮ ಎದುರಿಗೆ ಕೆಲವು ಪತ್ರಿಕೆಯವರು ಕಾಫಿ ಕುಡಿಯುತ್ತಾ ಕುಳಿತುಕೊಂಡಿದ್ದರು. ಇದು ವಾಸ್ತವಾಂಶ. ನಾಲ್ಕೈದು ಜನ ಈ ಇಲಾಖೆಗೆ ಸಂಬಂಧಪಟ್ಟಿರುವವರು ಇರಬಹುದು. ಬಹಳ ಮಟ್ಟಿಗೆ ನನಗೆ ಅನ್ನಿಸುತ್ತದೆ, just wait. Why are you worried.

(ಗೊಂದಲ)

ಶ್ರೀ ಕೆ.ಹೆಚ್. ರಂಗನಾಥ್:- ನನ್ನನ್ನು ಜೋರುಮಾಡಿ ಕೂರಿಸಲಿಕ್ಕೆ ಹೊರಟರೆ ಅದು ಬಹಳ ತಪ್ಪಾಗುತ್ತದೆ. ಈ ಸದನದಲ್ಲಿ ತಪ್ಪು ಮಾಡಿದರೆ ಕಾನೂನು ಪ್ರಕಾರ ಅದು ಸರಿಯಲ್ಲವೆಂಬ ಭಾವನೆಯನ್ನು ನಾವು ಇಟ್ಟುಕೊಂಡಿದ್ದೇವೆ. ಇಲ್ಲಿ ಆಗುತ್ತಿರುವುದನ್ನು ರಾಜ್ಯದ ಜನ ನೋಡುತ್ತಾ ಇದ್ದಾರೆ. ಅವರು ಎಷ್ಟು ಕೂಗಿದರೂ I will not be cowed down by these things. I do not want to look at them. I would like to place before this august house only the facts. ನಾವು ಅಲ್ಲಿ ಕುಳಿತುಕೊಂಡಿದ್ದೆವು. ಆಗ ನಾಲ್ಕಾರು ಜನ ಗುಮಾಸ್ತರಿರಬಹುದು, ನನಗೆ ಅವರ ಹೆಸರು ಗೊತ್ತಿಲ್ಲ, ಅವರು ಹಂಚುತ್ತಾ ಇದ್ದರು. ಡಾ. ಮಲಕರೆಡ್ಡಿಯವರಿಗೆ ಒಂದು ಕಾಪಿಯನ್ನು ಹಂಚಿದರು, ಆ ಕಾಪಿಯನ್ನು ನಾನು ತೆಗೆದುಕೊಂಡು ಹಾಗೆಯೇ ಇಟ್ಟುಕೊಂಡು ಇಲ್ಲಿಗೆ ಬಂದೆ. I did not show it to anybody, not even to the Secretary of my own party Mr. Ananthakrishna, who is a very close friend, as to what it is. ನಾನು ತಮ್ಮ ಮುಂದೆ ಏಕೆ ಇಟ್ಟೆ ಎಂದರೆ, ಇನ್ನೂ ಅನಾಹುತವಾಗಿಲ್ಲ, ಅದು ಮಂಡನೆ ಆಗಿಲ್ಲ, ಇಂಥಾದ್ದರಲ್ಲಿ ಅದನ್ನು ಮಂಡನೆ ಮಾಡಿದರೆ ತಪ್ಪಾಗಬಹುದೆಂದು ತಮಗೆ ನಾನು ಕೇಳಿಕೊಳ್ಳುತ್ತಿದ್ದೇನೆ. ಇದನ್ನು ತಾವು ನಿಲ್ಲಿಸಬೇಕು ಇದನ್ನು ಮಂಡನೆ ಮಾಡಿಸಬಾರದು. ಆಮೇಲೆ ಮುಖ್ಯಮಂತ್ರಿಗಳು ಮತ್ತೊಂದು ಭಾಷಣವನ್ನು ಮಾಡಲಿಕ್ಕೆ ಬರುತ್ತದೆ. ನಾಳೆಯೋ, ನಾಡಿದ್ದೋ, ಇನ್ನೊಂದು ದಿವಸ ಸಮಯ ತೆಗೆದುಕೊಂಡು ಭಾಷಣ ಮಾಡಲಿಕ್ಕೆ ಬರುತ್ತದೆ.

2.30 ಪಿ.ಎ.

(ಗೊಂದಲ)

ತಮಗೆ ಕಾನೂನು ಗೊತ್ತಿಲ್ಲ, ಏತಕ್ಕೆ ಮಾತನಾಡುತ್ತೀರಿ ತಾವು. ಕಾನೂನು ಗೊತ್ತಿದ್ದರೆ ಈ ರೀತಿ ಮಾತನಾಡುತ್ತಿರಲಿಲ್ಲ. ನಾನು ಮಾನ್ಯ ಕಾಗೋಡು ತಿಮ್ಮಪ್ಪನವರ ಬಗ್ಗೆ ಬಹಳ ಗೌರವವನ್ನು ಇಟ್ಟುಕೊಂಡಿದ್ದೆ. ಅವರಿಗೆ ಏನೂ ಕಾನೂನು ಗೊತ್ತಿಲ್ಲ ಎಂದು ಈಗ ಗೊತ್ತಾಯಿತು. ಇನ್ನು ತಮ್ಮ ವಿವೇಚನೆಗೆ ಬಿಟ್ಟಿದ್ದೇನೆ. ನನಗೆ ಅಲ್ಲಿ ಏನು ಕಾಪಿ ದೊರೆಯಿತು, ಅದನ್ನು ತೆಗೆದುಕೊಂಡು ಬಂದು ನಾನು ತಮಗೆ ಹೇಳಿದ್ದೇನೆ. ನಾನು ವಿನಂತಿ ಮಾಡಿಕೊಂಡಿದ್ದೇನೆ, I have not raised any point of order. I did not make any allegations against the Chief Minister or the Finance Minister who incidentally holds the portfolio. I did not make allegations.

ನಾನು ತಮಗೆ ಏನು ಹೇಳಿದೆಯೆಂದರೆ ಇದು ನಡೆದಿದೆ, ಇದಕ್ಕೆ ಅವಕಾಶವನ್ನು ಕೊಡಬೇಡಿ, ಅವಕಾಶವನ್ನು ಕೊಟ್ಟರೆ ತಪ್ಪಾಗಬಹುದು, ಮುಂದಿನ ಕಾನ್‌ಸಿಕ್ವೆನ್ಸಸ್ ಆಗಬಹುದು ಎಂದು ಹೇಳಿದ್ದೇನೆ. This is all the facts. ಆದುದರಿಂದ ಮುಂದಿನ ವಿಚಾರವನ್ನು ನಾನು ತಮಗೆ ಬಿಟ್ಟಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೇ, ಬಹಳ ಸುದೀರ್ಘವಾದಂಥ ವಿವರಣೆಯನ್ನು ಮಾನ್ಯ ಸಂಸದೀಯ ಸಚಿವರು ಕೊಟ್ಟಿದ್ದಾರೆ. ಅವರ ಒಟ್ಟು ವಿವರಣೆಯ ಅರ್ಥ ಅಥವಾ ವ್ಯಾಪ್ತಿ ಇಲ್ಲಿ ಶಾಸಕಾಂಗದ ಕಾರ್ಯಾಲಯದಲ್ಲಿ ಏನೋ ದೋಷ ನಡೆದಿದೆ ಎನ್ನುವಂಥದ್ದು.

ಶ್ರೀ ಎಂ. ವೀರಪ್ಪಮೊಯಿಲಿ:- ಆ ರೀತಿ ಅಲ್ಲ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಶಾಸಕಾಂಗದ ಕಾರ್ಯಾಲಯದಲ್ಲಿ ದೋಷ ನಡೆದಿದೆ ಎನ್ನುವುದು ನಿಮ್ಮ ಒಟ್ಟು ಮಾತಿನ ಅರ್ಥ.

I feel that it is casting an aspersion on the Chair itself. I may be wrong. Sir, two distinguishing factors that you got to take notice of are-

ತಮ್ಮ ಅಬ್ಸರ್ವೇಷನ್‌ನಲ್ಲಿ ಬಜೆಟ್‌ನ ಸ್ಯಾಂಕ್ಟಿಟಿ ಬಗ್ಗೆ ಹೇಳಿದ್ದೀರಿ.

I am going in terms of the contempt of the House, this very House itself. ಬಹಳ ಮುಖ್ಯವಾಗಿ, ಓರಿಯ ಸದಸ್ಯರಾದ ಶ್ರೀಮಾನ್ ರಂಗನಾಥರವರ ಶಾಸಕಾಂಗದ ಪ್ರಿಸಿಂಕ್ಟ್ಸ್ ಒಳಗೆ ಕಾಪಿ ಸಿಕ್ಕಿತು ಎನ್ನತಕ್ಕಂಥ ವಾದವನ್ನಾಗಲಿ, ಶಾಸಕಾಂಗದ ಕಛೇರಿಯಿಂದ ಕೊಟ್ಟರು ಎಂಬಾಗಲಿ ಅವರು ಪ್ರಸ್ತಾಪ ಮಾಡಲಿಲ್ಲ. ಇಲ್ಲಿ ಡಿಸ್ಟಿಂಕ್ಷನ್ ಏನೆಂದರೆ ಫೈನಾನ್ಸ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ಅಧಿಕಾರಿಗಳು ಕಾಪಿಯನ್ನು ಕೊಡುತ್ತಿದ್ದರು ಎನ್ನತಕ್ಕಂಥದ್ದು ಮುಖ್ಯವಾದ ಪ್ರಶ್ನೆ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ಇರಬಹುದು, ಯಾರಿಗೂ ಗೊತ್ತಿಲ್ಲ ಎಂದು ಹೇಳಿದ್ದಾರೆ. ಅಷ್ಟೂ ಗೊತ್ತಾಗುವುದಿಲ್ಲವೇ?

(ಗೊಂದಲ)

ಶ್ರೀ ಅಜೀಜ್ ಸೇಠ್:- ಈಗ ಹೇಳಿದರು.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- ಸನ್ಮಾನ್ಯ ಅಜೀಜ್ ಸೇಠ್‌ರವರೇ, ತಾವು ಬಹಳ ಹಿರಿಯ ಸದಸ್ಯರು ಇದ್ದೀರಿ, ನಾವು ಈ ಶಾಸನಸಭೆಯಲ್ಲಿ ಕುಳಿತು ಬಹಳ ವರ್ಷಗಳ ಕಾಲ ಕೆಲಸವನ್ನು ಮಾಡಿದ್ದೇವೆ. ಆ ಗುಮಾಸ್ತ ಯಾರು, ಈ ಗುಮಾಸ್ತ ಯಾರು ಎಂದು ಎಲ್ಲರಿಗೂ ಕೂಡ ಗೊತ್ತಿದೆ. ಶ್ರೀಮಾನ್ ರಂಗನಾಥ್‌ರವರಿಗೆ ವಿಧಾನ ಸಭೆಯಲ್ಲಿ, ಆ ಕಾರ್ಯಾಲಯದಲ್ಲಿ ಕೆಲಸ ಮಾಡತಕ್ಕಂಥ ಎಲ್ಲಾ ನೌಕರರುಗಳ ಪರಿಚಯವೂ ಇದೆ. ಅವರು ಅಲ್ಲಿ ಕುಳಿತು ಕೆಲಸವನ್ನು ಮಾಡಿರತಕ್ಕಂಥವರು. ಅದಕ್ಕೆ ನಮ್ಮದೇ ವ್ಯಾಖ್ಯಾನವನ್ನು ಕೊಡತಕ್ಕಂಥದ್ದು ಬೇಡ. ಅವರು ವಸ್ತು ಸ್ಥಿತಿಯನ್ನು ಹೇಳಿದ್ದೇನೆ ಎಂದು ಹೇಳಿದ್ದಾರೆ. ವಸ್ತುಸ್ಥಿತಿ ಏನೆಂದರೆ, ಆಯವ್ಯಯ, ಈ ಸದನದಲ್ಲಿ ಪ್ರಸ್ತಾಪವಾಗುವುದಕ್ಕಿಂತ ಮುನ್ನ ಬಹಿರಂಗವಾಗಿದೆ. ಇದು ವಸ್ತುಸ್ಥಿತಿ. ಇದು ಹೀಗೆ ಬಹಿರಂಗವಾಗಿದ್ದರೆ ಈ ಸದನಕ್ಕೆ ಒಂದು ದೊಡ್ಡ ಅವಮಾನ, ಈ ನಾಡಿನ ಜನರಿಗೆ ಆದಂಥ ಅವಮಾನ. ಹೀಗಾದರೆ ನಾವು ಎಲ್ಲಾ ಕಾನೂನು ಪುಸ್ತಕಗಳನ್ನು ಬದಿಗೊತ್ತಿ, ಬಿಸಾಕಿ ಇನ್ನು ಮೇಲೆ ಬೀದಿಯಲ್ಲಿ ಬಜೆಟ್ ಭಾಷಣವನ್ನು ಮಾಡಬಹುದು. ಅದಕ್ಕೆ ಈ ಸದನ ಬೇಕಾಗಿಲ್ಲ. ಈ ಸದನದ ಗೌರವ ಸ್ಯಾಂಕ್ಟಿಟಿ ಎನ್ನುವಂಥ ಪದ ಏನಿದೆ ಅದು ಈಗ ಒಟ್ಟಾರೆ ಬಜೆಟ್‌ನ ಸ್ಯಾಂಕ್ಟಿಟಿ ಉಳಿದಿಲ್ಲ. ಇದರ ಜೊತೆಗೆ ಶಾಸನಸಭೆಗೆ ಬರುವುದಕ್ಕೆ ಮುನ್ನ ಬಹಳ ಬಂದೋಬಸ್ತಾದ ಪೆಟ್ಟಿಗೆಯಲ್ಲಿ ಅದನ್ನು ಮುಚ್ಚಿಟ್ಟುಕೊಂಡು ಬರುತ್ತಾರೆ. ಆಗ ಫೋಟೋಗ್ರಾಫರ್ಸ್, ಅವರು, ಇವರು ಈ ರಾಜ್ಯಕ್ಕೆ ಏನೋ ಬಜೆಟ್ ಬರುತ್ತಿದೆ, ಈ ಆಯ ಏನು, ವ್ಯಯ ಎಷ್ಟು, ಯಾವ ಬಾಬಿನಲ್ಲಿ ಎಷ್ಟು ಟ್ಯಾಕ್ಸೇಷನ್ ಬರುತ್ತದೆ ಎಂದು ಕಾದಿರುತ್ತಾರೆ. ಹಾಗೆ ಗೌಪ್ಯತೆಯನ್ನು ಕಾಪಾಡತಕ್ಕಂಥ ಮುಖ್ಯವಾದ ಕಾರಣ ಏನೆಂದರೆ ಇದು ಹೊರಗಡೆ ಹೋಗಬಾರದು, ಅಂಗೀಕಾರ ಮಾಡತಕ್ಕಂಥ ಈ ಶಾಸನಸಭೆಗೆ ಮೊದಲು ಗೊತ್ತಾಗಬೇಕು, ಆಮೇಲೆ ಉಳಿದವರಿಗೆ ಗೊತ್ತಾಗಬೇಕು. ಬಹುಶಃ ಈ ದೇಶದಲ್ಲಿ ಫೈನಾನ್ಸ್ ಮಿನಿಸ್ಟರ್ ಮತ್ತು ಸೆಕ್ರೆಟರಿಯೇಟ್ ಇದೆ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಮೊದಲನೆಯದಾಗಿ ಇದು Contempt of the House. ತಮ್ಮಲ್ಲಿ ನಾನು ಪ್ರಾರ್ಥನೆಯನ್ನು ಮಾಡಿಕೊಳ್ಳುತ್ತೇನೆ. You have inherent right to refer the matter to the Privilege Committee. I feel it is a clear case of contempt of the House.

Sir, I would like to draw your kind attention to the fact when the matter of such a great importance has been raised the procedure for dealing with the question of privilege is broadlly laid down in the rules.

"A question of privilege may be raised in the House only after obtaining the consent of the Speaker." Therefore, I am trying to obtain your consent on a question of the contempt of the House, the very House itself, apart from the sanctity of the Budget, the sanctity of the House is involved. I appeal to you, Sir, that I have given a notice just now, signed by the Hon. Members of all the political parties, all the four leaders and the other member too. My submission is while seeking to raise the question of privilege the member should lay before the House all necessary evidence in support of his contention. Here is a special case where I need not produce any document, any paper whatsoever because ತಮ್ಮ ಎದುರುಗಡೆ ಗೌರವಾನ್ವಿತ ಸದ್ಯಸರಾಗಿರತಕ್ಕಂಥ ಮತ್ತು ವಿಧಾನಸಭೆಯ ಅಧ್ಯಕ್ಷರೂ ಆಗಿದ್ದಂಥ ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ್ ರಂಗನಾಥ್‌ರವರು ತಮಗೆ ಬಹಳ ಪ್ರಾಮುಖ್ಯವಾದ ವಿಷಯವನ್ನು ಗಮನಕ್ಕೆ ತಂದಿದ್ದಾರೆ. ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ. ಇದಕ್ಕಾಗಿ ಯಾವ ದಾಖಲಾತಿಗಳನ್ನು ಕೊಡತಕ್ಕಂಥ ಅವಶ್ಯಕತೆ ಇಲ್ಲ, ದಾಖಲಾತಿ ಮತ್ತು ಸಾಕ್ಷ್ಯ ತಾವೇ. ತಮ್ಮ ಸಮ್ಮುಖದಲ್ಲಿ ನಡೆದಿರತಕ್ಕಂಥ ಇಂಥ ಪ್ರಕರಣಗಳು ಕನಿಷ್ಟಪಕ್ಷ

ಇನ್ನು ಮುಂದೆ ನಡೆಯದೇ ಇರತಕ್ಕಂಥದ್ದು ಈ ಶಾಸನಸಭೆಗೆ ಗೌರವವನ್ನು ತರತಕ್ಕಂಥ ದೃಷ್ಟಿಯಿಂದ ತಾವು ಇದು Breach of privilege and contempt of the House ಆಗಿದೆ ಎನ್ನತಕ್ಕಂಥದ್ದನ್ನು ದಯಮಾಡಿ ಗಮನಿಸಿ, ಇದನ್ನು ನೇರವಾಗಿ ತಾವು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿತಕ್ಕಂಥ ಅವಕಾಶವನ್ನು ಮಾಡಿಕೊಡಬೇಕು ಎಂದು ತಮ್ಮಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಹಿರಿಯ ಸದಸ್ಯರಾದ ರಂಗನಾಥ್‌ರವರು ಹೇಳಿರತಕ್ಕಂಥದ್ದು ಬೇರೆ ಮುನ್ನ ಸದಸ್ಯರುಗಳು ಹೇಳಿರತಕ್ಕಂಥದ್ದು ಮತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರತಕ್ಕಂಥ ವಿಚಾರಗಳನ್ನು ತಾವು ಕೇಳಿದ್ದೀರಿ. ಈಗ ಯಾವ ವಿಷಯವನ್ನು ಅವರು ಹೇಳಿದ್ದಾರೆ, ಬಜೆಟ್ಟಿನ ಪ್ರಾಮುಖ್ಯತೆಯ ಅರಿವಿನ ಹಿನ್ನೆಲೆಯಲ್ಲಿ ನಾವು ಪ್ರಾಮುಖ್ಯತೆಯನ್ನು ಕುಂತಿಗೊಳಿಸಬಾರದು, ಬಜೆಟ್ ಮೊದಲು ಈ ಸದನಕ್ಕೆ ಗೊತ್ತಾಗಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ಇಟ್ಟು ಮಾನ್ಯ ಸದಸ್ಯರು ಹೇಳಿದ್ದಾರೆ. ಆ ನೀತಿ ಪ್ರಶ್ನೆ, ಪ್ರಿನ್ಸಿಪಲ್ ವಿಚಾರದಲ್ಲಿ ಯಾವುದೇ ಅಭ್ಯಂತರ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದ್ದಾರೆ ಎಂದರೆ, ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಿಕೊಡಿ.

ಅದರ ಬಗ್ಗೆ ವಿಚಾರಮಾಡಿ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದು ತಮಗೆ ಬಿಟ್ಟಿರತಕ್ಕಂಥ ವಿಚಾರ. ಅದರ ಬಗ್ಗೆ ವ್ಯಾಖ್ಯಾನವನ್ನು ಮಾಡುವುದಕ್ಕೆ ನಾನು ಹೋಗುವುದಿಲ್ಲ. ಮಾನ್ಯ ರಂಗನಾಥರವರು ಹೇಳಿದ ವಿಚಾರವನ್ನೂ ಕೂಡ ನಾವು ಇಲ್ಲಿ gospel truth ಎಂದು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. That is also a matter for enquiry whether he got that copy of the Budget there in the lounge or not. It is a matter for enquiry, that is all, it does not stretch beyond that point. Sir, ಅದಕ್ಕಾಗಿ ತಮ್ಮಲ್ಲಿ ನಾನು ಏನು ಅಪೀಲು ಮಾಡುತ್ತೇನೆ ಎಂದರೆ, ಎರಡು ಸೈಡ್‌ನಿಂದಲೂ ತಾವು ವಿಷಯವನ್ನು ಕೇಳಿದ್ದೀರಿ. ತಾವು ಅಂತಿಮವಾಗಿ ಏನು ತೀರ್ಪು ಕೊಡಬೇಕು ಎನ್ನತಕ್ಕಂಥ ವಿಚಾರ ತಮಗೆ ಬಿಟ್ಟಿರತಕ್ಕಂಥದ್ದು. ತಾವು ಹೇಳಿದ್ದಕ್ಕೆ ತಲೆಬಾಗಿ ಹೋಗತಕ್ಕಂಥ ಕರ್ತವ್ಯ ನಮ್ಮ ಹತ್ತಿರ ಇದೆ. ಇಡೀ ಸದನಕ್ಕೂ ಇದೆ. ಈಗ ತಾವು ತಮಗೆ ಬಜೆಟ್ ಮಂಡನೆ ಮಾಡುವುದಕ್ಕೆ ಪರವಾನಗಿ ಕೊಟ್ಟಿದ್ದೀರಿ ಎಂದು ನಾನು ಭಾವಿಸಿದ್ದೇನೆ. ಅದು ನನಗೆ ಬಿಟ್ಟಿರತಕ್ಕಂಥದ್ದು.

(ಗೊಂದಲ)

ಶ್ರೀ ಹೆಚ್. ಏಕಾಂತಯ್ಯ:- ನಮ್ಮ ಅಭಿಪ್ರಾಯವನ್ನು ಸ್ವಲ್ಪ ಕೇಳಲಿ.

(ಗೊಂದಲ)

ಅಧ್ಯಕ್ಷರು:- ಅವರು ಹೇಳುತ್ತಿರುವುದು ಏನೆಂದರೆ, ನಮ್ಮದೂ ಸ್ವಲ್ಪ ಕೇಳಿಬಿಟ್ಟು ಆಮೇಲೆ ಕೊಡಿ ಎಂದು ಹೇಳುತ್ತಿರುವುದು.

(ಗೊಂದಲ)

SRI R.V. DESHPANDE:- Secretariat officials trace...

ಶ್ರೀ ಎಸ್. ಬಂಗಾರಪ್ಪ:- ನಾನು ತಮ್ಮನ್ನು ಕೇಳಬಾರದು ಎಂದು ಹೇಳಲಿಲ್ಲ, ಮತ್ತೊಂದು ಹೇಳಲಿಲ್ಲ. ಅದು ಮಾನ್ಯ ಸಭಾಧ್ಯಕ್ಷರಿಗೆ ಬಿಟ್ಟಿರತಕ್ಕಂಥ ವಿಚಾರ. ಅದಕ್ಕೆ ನಾನೇಕೆ ಅಡ್ಡಬರಲಿ. ಅದು ತಮಗೆ ಇರತಕ್ಕಂಥ ಹಕ್ಕು. ಆ ವಿಚಾರವನ್ನು ನಾನು ಮಾತನಾಡುತ್ತಿಲ್ಲ. ಈ ವಿಚಾರವನ್ನು ಹೇಳಿರತಕ್ಕಂಥದ್ದು ಕೂಡ ಅದು ಸರಿಯೋ ಅಲ್ಲವೋ ಎನ್ನತಕ್ಕಂಥ ವಿಚಾರ ಇದರಲ್ಲಿ ಅಡಗಿರುವುದರಿಂದ ಬಜೆಟ್ ಪ್ರೆಸೆಂಟೇಷನ್‌ಗೆ ಅದು ಅಡ್ಡಿ ಬರುವುದಕ್ಕೆ ಕಾರಣ ನನಗೇನೂ ಕಾಣಿಸುತ್ತಿಲ್ಲ. ಇದು ಸ್ಪಷ್ಟವಾಗಿರತಕ್ಕಂಥ ವಿಚಾರ. ಈ ವಿಚಾರವನ್ನು ಈ ಸದನದ ಎಲ್ಲಾ ಮೂಲಗಳ ಮಾನ್ಯ ಸದಸ್ಯರುಗಳು ಒಪ್ಪುತ್ತಾರೆ ಎನ್ನತಕ್ಕಂಥ ಭಾವನೆಯಿಂದ ಈ ಮಾತನ್ನು ನಾನು ಅಡಿದ್ದೇನೆ. ದಯವಿಟ್ಟು ತಮ್ಮ ಅಂತಿಮ ಮಾತನ್ನು ತಾವು ಆಡಿ ನನಗೆ ಬಜೆಟ್ ಪ್ರೆಸೆಂಟ್ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಾವು ಇಲ್ಲಿ ಹೇಳಿದ್ದೀರಿ, ಇದು ಬಹಳ ಅಮೂಲ್ಯವಾಗಿರತಕ್ಕಂಥ ವಿಚಾರ, ಪ್ರಾಮುಖ್ಯವಾಗಿರತಕ್ಕಂಥ ವಿಚಾರ ಎಂದು ಹೇಳಿದ್ದೀರಿ. ಬಹಳ ಹೊಸ ಹೊಸ ವಿಚಾರಗಳನ್ನು ಪ್ರಸ್ತಾಪ ಮಾಡತಕ್ಕಂಥ ಸಂದರ್ಭವನ್ನು ಇಟ್ಟು ನಾನು ಇಲ್ಲಿ ಬಂದಿದ್ದೇನೆ. ಗೌಪ್ಯತೆಯನ್ನು ಕಾಪಾಡತಕ್ಕಂಥದ್ದು ಮತ್ತೊಂದರಲ್ಲಿ ಶಕ್ತಿಮೀರಿ ನಾವು ಅದನ್ನು ಮಾಡಿದ್ದೇವೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಈ ಪ್ರೊಸೀಜರ್ ಹೇಗೆ ಎನ್ನುವ ಬಗ್ಗೆ ಹೇಳಿದ್ದಾರೆಯೇ ವಿನಃ ತಮ್ಮ ಮೇಲಾಗಲಿ, ತಮ್ಮ ಲೆಜಿಸ್ಲೇಚರ್ ಸೆಕ್ರೆಟೆರಿಯೇಟ್ ಮೇಲಾಗಲಿ, ಹೇಳಬೇಕು ಎನ್ನತಕ್ಕಂಥ ಉದ್ದೇಶ ಇಟ್ಟು ಅವರು ಏನೇನೂ ಕೂಡ ಮಾತನಾಡಿಲ್ಲ ಜೊತೆಗ ಏನು ನಡೆಯುತ್ತಿದೆ ಎನ್ನುವುದನ್ನು

ಈಗ ತಾವು ನೋಡಬಹುದು, ತಮ್ಮೆದುರಿಗೆ ಅಲ್ಲೇ ಪ್ರತಿಗಳು ಇವೆ, ಇಲ್ಲಿಯೂ ಇವೆ. ಈಗ ಅವರು ಕೊಡುವುದಕ್ಕೆ ಸಿದ್ಧಮಾಡಿಕೊಂಡು ಕುಳಿತುಕೊಳ್ಳಬೇಕು. ಏಕೆಂದರೆ, ನಾವು ಓದುವ ಹೊತ್ತಿಗೆ ನಮಗೆ ಕೊಟ್ಟಿಲ್ಲ ನಮಗೆ ಕೊಟ್ಟಿಲ್ಲ, ತಡವಾಗುತ್ತಿದೆ ಎಂದು ಎಷ್ಟೋ ಸಾರಿ ನಾವೇ ಅಬ್ಜೆಕ್ಷನ್ ತೆಗೆದುಕೊಂಡಿದ್ದೇವೆ. ಆ ದೃಷ್ಟಿಯಿಂದ ಪ್ರತಿಗಳನ್ನು ತೆಗೆದು ಇಟ್ಟಿರತಕ್ಕಂಥದ್ದು. ಅದನ್ನು ನಿಮಗೆ ಕೊಡಲೇಬೇಕಾಗುತ್ತದೆ. ಅದನ್ನು ಅಲ್ಲಿ ಇಡಲೇಬೇಕಾಗುತ್ತದೆ. ಆ ದೃಷ್ಟಿಯಿಂದ ಕೊಟ್ಟಿದೆಯೇ ವಿನಃ..

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:- ಅವರು ಹೇಳಿದ್ದಕ್ಕೆ ಒಂದಕ್ಕೂ ತಾವು ಉತ್ತರವನ್ನು ಕೊಡಲಿಲ್ಲ.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ನಾನು ಏನು ಹೇಳುತ್ತೇನೆ, ತಾವು ಹೇಳಿರತಕ್ಕಂಥದ್ದು ಸರಿಯೋ ಇಲ್ಲವೋ ಅದನ್ನು ಅವರು ವಿಚಾರ ಮಾಡುತ್ತಾರೆ. ಇದನ್ನು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಪ್ಪುತ್ತಾರೆ ಎಂದು ನಾನು ಭಾವಿಸಿದ್ದೇನೆ. ಅದು ಸರಿಯೋ ಇಲ್ಲವೇ ಎನ್ನುವುದನ್ನು ಅದನ್ನು ಸಭಾಧ್ಯಕ್ಷರಿಗೆ ಬಿಡೋಣ. ಅವರ ತೀರ್ಪಿಗೆ ನಾವು ತಲೆಬಾಗೋಣ. ಇದಕ್ಕಿಂತ ಹೆಚ್ಚಿಗೆ ಏನು ಹೇಳುವುದು? ಅವರೇ ಅದನ್ನು ವಿಚಾರ ಮಾಡಲಿ. ಮಾನ್ಯ ಸಭಾಧ್ಯಕ್ಷರೆ, ನಾನು ಇದನ್ನು ತಮಗೇ ಬಿಡುತ್ತೇನೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ಸದನದ ಹೊರಗಡೆ ಇರುವಂಥ ಪ್ರಜೆಗಳಿಗೆ ನ್ಯಾಯಾಲಯಕ್ಕೆ ಹೋಗುವಂಥ ಹಕ್ಕನ್ನು ಈ ಪ್ರಕರಣ ಕೊಟ್ಟುಬಿಟ್ಟಿದೆ. ಇದನ್ನು ನಾನು ಈ ಸದನದ ಎಲ್ಲಾ ಗೌರವಾನ್ವಿತ ಸದಸ್ಯರ ಗಮನಕ್ಕೆ ತರತಕ್ಕಂಥ ಒಂದು ಅವಶ್ಯಕತೆ ಇದ್ದುದರಿಂದ ನಾನು ಎದ್ದು ನಿಂತಿದ್ದೇನೆ. ಈ ವಿಷಯ ಈಗಾಗಲೇ ಸದನದಿಂದ ಆಚೆಗೆ ಹೋಗಿದೆ. ತಾವು ಮುಂದುವರಿಯಬಹುದು. ನಾನಂತೂ ಇನ್ನು ಮುಂದಿನ ಚಟುವಟಿಕೆಗಳಲ್ಲಿ ಭಾಗವಹಿಸುವುದಿಲ್ಲ ಎಂದು ಹೇಳುವುದಕ್ಕೆ ನಾನು ಎದ್ದು ನಿಂತಿರುವುದು. This has already gone out of the House.

ನಾಲ್ಕು ಕೋಟಿ ನಮ್ಮ ಕರ್ನಾಟಕದ ಪ್ರಜೆಗಳು ಏನು ಇದ್ದಾರೆ, ಅವರಿಗೆ ನ್ಯಾಯಾಲಯ ಹತ್ತುವಂಥ ಹಕ್ಕು ಬಂದುಬಿಟ್ಟಿದೆ, because this has become a scrap of paper. It is no more a Budget. It is a scrap of paper that cannot be implemented.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್:- ಒಂದೇ ಒಂದು ವಿಷಯ ಗೊತ್ತಾಗಿದ್ದರೆ ತಾವು ಹೇಳಿ ನೋಡೋಣ. ಸ್ಕ್ರಾಪ್ ಪೇಪರ್ ಎಂದು ಹೇಳುತ್ತೀರಲ್ಲಾ ಹೇಗೆ?

(ಗೊಂದಲ)

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ಮಾನ್ಯ ಸಭಾಧ್ಯಕ್ಷರೆ, ನನ್ನದು ಒಂದೇ ಒಂದು ವಿನಂತಿ.

ಇದು ಈ ಸದನದ ಘನತೆ ಗೌರವದ ಪ್ರಶ್ನೆಯಾಗಿದೆ. ಆ ಕಾರಣ ಇವತ್ತಿನ ಚಟುವಟಿಕೆಗಳಲ್ಲಿ ನಾನು ಮಾತ್ರ ವೈಯಕ್ತಿಕವಾಗಿ ಭಾಗವಹಿಸುವುದಕ್ಕೆ ನನಗೆ ಇಷ್ಟವಿಲ್ಲ.

ಅಧ್ಯಕ್ಷರು:- ಸ್ವಲ್ಪ ಕುಳಿತುಕೊಳ್ಳಿ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ:- ತಾವು ದಯವಿಟ್ಟು ಕೇಳಬೇಕು. ತಾವು ಏನು ರೂಲಿಂಗ್ ಕೊಡುತ್ತೀರೋ ಆನಂತರ ನಾನು ಸಭಾತ್ಯಾಗ ಮಾಡಬಾರದು ಎನ್ನುವ ಕಾರಣದಿಂದ ನಾನು ಮುಂಚೆಯೇ ಹೋಗುತ್ತಿದ್ದೇನೆ, ಅಷ್ಟೆ.

(ಈ ಹಂತದಲ್ಲಿ ಮಾನ್ಯ ನಂಜುಂಡಸ್ವಾಮಿಯವರು ಸಭಾತ್ಯಾಗ ಮಾಡಿದರು.)

ಅಧ್ಯಕ್ಷರು:- ವಿಚಾರಗಳೆಲ್ಲಾ ಅರ್ಥವಾಗಿದೆ. ಆದುದರಿಂದ ಸಂಕ್ಷಿಪ್ತವಾಗಿ ತಾವು ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಸಿ. ಬೈರೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಸಂಸದೀಯ ವ್ಯವಹಾರಗಳ ಮಂತ್ರಿಗಳು ಕೊಟ್ಟರತಕ್ಕಂಥ ಉತ್ತರದಲ್ಲಿ ಅವರು ಏನು ಹೇಳಿದ್ದಾರೆಂದರೆ, ಈ ಸದನ ಸೇರುವುದಕ್ಕೆ ಒಂಬೆ ಗಂಟೆಗೆ ಮೊದಲು ತಮ್ಮ ಕಛೇರಿಗೆ ಅದನ್ನು ಕೊಡಿಸಿದ್ದೇವೆ, ಅದನ್ನು ಅಲ್ಲಿ ಇಟ್ಟಿರುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಅದಕ್ಕೆ ಒಂದು ಹೊಸ ತಿರುವನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಆದರೆ ನನಗೆ ಗೊತ್ತಿರುವ ಮಟ್ಟಿಗೆ ಇದು ಲೆಜಿಸ್ಲೇಚರ್ ಸೆಕ್ರೆಟರಿಯೇಟ್‌ನಿಂದ ಆಗಿರತಕ್ಕಂಥ ಘಟನೆಯಲ್ಲ, ಕಾರಣವೇನೆಂದರೆ, ನಾವು ಈ

ಕಡೆ ನಿಂತಿದ್ದೆವು. ನಾವು ಒಂದು ಮುಕ್ಕಾಲು ಗಂಟೆಗೆ ಲಾಂಜ್‌ಗೆ ಬಂದೆವು. ಬಂದ ತಕ್ಷಣ ಪತ್ರಿಕಾ ಪ್ರತಿನಿಧಿಗಳೆಲ್ಲಾ ಮಾತನಾಡುತ್ತಿದ್ದರು, ಬಜೆಟ್ ಪುಸ್ತಕ ಹೊರಗಡೆ ಬಂದಿದೆ ಎನ್ನತಕ್ಕಂಥ ಮಾತನ್ನು ಆಡುತ್ತಿದ್ದರು. ಆಮೇಲೆ ಕೆಲವು ಸ್ನೇಹಿತರು ಕೆಲವು ಪತ್ರಿಕಾ ಪ್ರತಿನಿಧಿಗಳು ಮಾತನಾಡಿದ್ದು ಏನೆಂದರೆ, ಮಾನ್ಯ ರಂಗನಾಥರವರ ಕೈಯಲ್ಲಿ ಕೂಡ ಇದೆ ಎನ್ನತಕ್ಕಂಥ ಮಾತನ್ನು ಆಡಿದರು. ಆಮೇಲೆ ಲೆಜಿಸ್ಲೇಚರ್ ಸೆಕ್ರೆಟೇರಿಯೇಟ್‌ನವರು ಒಬ್ಬರು ನಮ್ಮ ಮುಂದೆಯೇ ಕುಳಿತಿದ್ದಾರೆ ಅವರು ಪುಸ್ತಕಗಳನ್ನು ತೆಗೆದುಕೊಂಡು ಬಂದರು ಆಗ ಮಾನ್ಯ ವಾಟಾಳ್ ನಾಗರಾಜರವರು ಒಂದು ಪುಸ್ತಕವನ್ನು ಕೊಡಪ್ಪ ಎಂದು ಕೇಳಿದರು. ಅವರು ಒಂದು ಪುಸ್ತಕವನ್ನು ಕೊಡಲಿಲ್ಲ. ಅಲ್ಲದೆ ಒಂದು ಪುಸ್ತಕವನ್ನು ಮುಟ್ಟುವುದಕ್ಕೂ ಅವಕಾಶ ಕೊಡಲಿಲ್ಲ. ಹೀಗಿರುವಾಗ ವೃಥಾ ಲೆಜಿಸ್ಲೇಚರ್‌ನವರ ಮೇಲೆ ಆಸ್ಪರ್ಶನ್ಸ್ ಕ್ಯಾಸ್ಟ್ ಮಾಡತಕ್ಕಂಥ ಪ್ರಯತ್ನ ಇವತ್ತು ಏನು ನಡೆಯುತ್ತಿದೆ, ಇದು ಆಗಬಾರದು.

ಯಾವಾಗ ಈ ಸಭೆ ಅಸೆಂಬಲ್ ಆಗುತ್ತದೆ ಎಂದರೆ, ತಾವು ಎದ್ದು ನಿಂತು ಇವತ್ತಿನ ಕಾರ್ಯಕಲಾಪವನ್ನು ಪ್ರಾರಂಭಿಸಬಹುದು ಎಂದು ಹೇಳಿದ ಮೇಲೆ ಈ ಸಭೆ ಅಸೆಂಬಲ್ ಆಗುತ್ತದೆ. ಅದಕ್ಕೆ ಮೊದಲು ಅಸೆಂಬಲ್ ಆಗುವುದಿಲ್ಲ, ಮಾನ್ಯ ರಂಗನಾಥರವರು ತಾವು ಹೇಳುವುದಕ್ಕಿಂತ ಮೊದಲು, ಆಗಿರತಕ್ಕಂಥ ಲೋಪದ ಬಗ್ಗೆ ಸಭೆಯ ಗಮನವನ್ನು ತಮ್ಮ ಗಮನವನ್ನು ಸೆಳೆದಿದ್ದಾರೆ. ಈ ಸದನದ ಹಕ್ಕು ಚ್ಯುತಿ ಆಗಿದೆ. ಆದುದರಿಂದ ತಾವು ಇವತ್ತಿನ ದಿವಸ ಈ ಬಜೆಟ್‌ನ್ನು ಮಂಡನೆ ಮಾಡುವುದಕ್ಕೆ ದಯವಿಟ್ಟು ಅವಕಾಶವನ್ನು ಕೊಡಕೂಡದು. ಈ ಸರ್ಕಾರ ಬೇಜವಾಬ್ದಾರಿಯಿಂದ ನಡೆದಿರತಕ್ಕಂಥ ಕಾರಣದಿಂದ ಈ ಬಜೆಟ್ ಇವತ್ತಿನ ದಿವಸ ಹೊರಗಡೆ ಬಂದಿದೆ. ಈ ಸದನದ ಹಕ್ಕುಚ್ಯುತಿ ಆಗಿದೆ. ಈ ಸದನದ ಘನತೆ, ಗೌರವ ಮಣ್ಣು ಪಾಲಾಗಿದೆ. ಇದನ್ನು ಕಾಪಾಡತಕ್ಕಂಥದ್ದು ತಮ್ಮ ಮತ್ತು ನಮ್ಮೆಲ್ಲರ ಕರ್ತವ್ಯ. ಈ ಕೆಲಸವನ್ನು ತಾವು ಮಾಡಬೇಕು ಎಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ.

ಡಾ: ಜೀವರಾಜ ಆಳ್ವ:- ಈಗ 2 ಗಂಟೆ 50 ನಿಮಿಷ ಆಯಿತು. 20 ನಿಮಿಷಕ್ಕೆ ಮೊದಲು ಮಾನ್ಯ ರಂಗನಾಥರವರ ಕೈಯಲ್ಲಿ ಪೇಪರ್ ಸಿಕ್ಕಿನೆ. ಸುಮಾರು ಒಂದು ಗಂಟೆ ಲ್ಯಾಪ್ಸ್ ಆಗಿದೆ. There was a lapse of one hour between the presentation of the Budget. ಇನ್ನು ಬಜೆಟ್‌ನ್ನು ಪ್ರೆಸೆಂಟ್ ಮಾಡುವುದಕ್ಕೆ ಸಾಧ್ಯವಿಲ್ಲ.

(ಗೊಂದಲ)

MR. SPEAKER:- Let us not allow any more time to lapse. Let me put things in its right perspective.

ಈ 1992-93ರ ಆಯವ್ಯಯ ಪತ್ರವನ್ನು ಮಂಡಿಸುವುದಕ್ಕಾಗಿ ನಾವು ಎರಡು ಗಂಟೆಗೆ ಸಮಾವೇಶವಾಗಿದ್ದೇವೆ. ನಾನು ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳನ್ನು ಕರೆಯುವ ಸಂಬಂಧದಲ್ಲಿ ಈ ಸದನದ ಹಿರಿಯ ಸದಸ್ಯರಾದ ಈ ಸಭೆಯ ಮಾಜಿ ಅಧ್ಯಕ್ಷರೂ ಆದಂಥ ಮಾನ್ಯ ರಂಗನಾಥರವರು ನನ್ನ ಗಮನವನ್ನು ಸೆಳೆದರು. ಅವರ ಕೈಯಲ್ಲಿ ಇದ್ದಂಥ ಪುಸ್ತಕವನ್ನು ನಾನು ಕಂಡು ಅವರನ್ನು ಕೇಳಬೇಕೆಂದು ಅನಿಸಿತು. ಈ ನನ್ನ ಪ್ರಾಸ್ತಾವಿಕ ನಿಲುವಿನ್ನು ನಾನು ಈಗಾಗಲೇ ಹೇಳಿದ್ದೇನೆ. ಆಯವ್ಯಯ ಪತ್ರ ಸಂಸದೀಯ ವ್ಯವಹಾರಗಳ ಚೌಕಟ್ಟಿನಲ್ಲಿ ಬಜಟ್ ಪ್ರಾಮುಖ್ಯ ಮತ್ತು ಆ ಆಯವ್ಯಯ ಪತ್ರಕ್ಕೆ ಸಾಕಾದಷ್ಟು ಸೀಕ್ರೆಸಿಯನ್ನು ಕೂಡ ಇರಬೇಕಾಗುತ್ತದೆ. ಬ್ರಿಟನ್‌ನಲ್ಲಿ ಎರಡು ಪ್ರಕರಣಗಳಲ್ಲಿ ಆಯವ್ಯಯದ ಕೆಲವು ವಿಚಾರಗಳು ಹೌಸ್ ಆಫ್ ಕಾಮನ್ಸ್‌ನ ಮುಂದೆ ಮಂಡಿತವಾಗುವ ಮೊದಲು ಅದು ಪ್ರಕಟಿತ ಆಗಿದೆ ಎನ್ನತಕ್ಕಂಥ ಆಧಾರದ ಮೇಲೆ ಇಬ್ಬರು ಹಣಕಾಸಿನ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟ ಪ್ರಸಂಗಗಳು ಈಗ ಇತಿಹಾಸದ ಪುಟಕ್ಕೆ ಸೇರಿದೆ. ಈಗ ನಾವು ನಮ್ಮ ಭಾರತದ ಪಾರ್ಲಿಮೆಂಟ್ ಸಂಪ್ರದಾಯ ಮತ್ತು ನಮ್ಮ ಸದನದ ಸಂಪ್ರದಾಯ ಈ ಚೌಕಟ್ಟಿನ ಕೆಳಗೆ ಈಗ ಉದ್ಭವವಾಗಿರತಕ್ಕಂಥ ಈ ಒಂದು ಸೂಕ್ಷ್ಮವಿಚಾರದ ಬಗ್ಗೆ ನಮ್ಮ ಗಮನವನ್ನು ಪಕ್ಕಾತೀತವಾಗಿ ಹರಿಸಬೇಕಾಗಿರತಕ್ಕಂಥಾದ್ದು ನಾವು ಏನು ಸದನಕ್ಕೆ ಬಂದ ದಿವಸ ಪ್ರತಿಜ್ಞಾ ವಿಧಿಯನ್ನು ತೆಗೆದುಕೊಂಡು ಅದಕ್ಕೆ ನಾವು ಬೆಲೆಯನ್ನು ಕೊಟ್ಟಂತೆ ಆಗುತ್ತದೆ. ಈಗ ಡಿಸ್ಟ್ರಿಬ್ಯೂಷನ್ ಆಫ್ ಬಜೆಟ್ ಪೇಪರ್ಸ್. ಈ ಹಿಂದೂಗಳಿಗೆ ವೇದಗಳೋ, ಗೀತೆಗಳೋ, ಕ್ರಿಶ್ಚಿಯನ್ನರಿಗೆ ಬೈಬಲ್, ಮುಸಲ್ಮಾನರಿಗೆ ಖುರಾನ್ ಹೇಗೋ ಹಾಗೆ, ನನಗೆ, ಶಾಸನಸಭೆಯ ಅಧ್ಯಕ್ಷರಿಗೆ ಬೈಬಲ್, ಖುರಾನ್, ಭಗವದ್ ಗೀತೆ ಎಲ್ಲಾ ಇವೇ. ಇದರಲ್ಲಿ ಎಲ್ಲಾ ಇದೆ.

ಇದರಲ್ಲಿ ಒಟ್ಟು 1040 ಪುಟಗಳಿವೆ. ಈ 1040 ಪುಟಗಳಲ್ಲಿ ಮತ್ತು ನಾವು ನಿಯಮಾವಳಿಯನ್ನು ಮಾಡಿರತಕ್ಕಂಥಾದ್ದನ್ನು ನಿಮಗೆ ತೋರಿಸಿದ್ದೇನೆ. ಇವೆರಡರ ಚೌಕಟ್ಟಿನಲ್ಲಿ ನಾನು ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ತೀರ್ಮಾನ ತೆಗೆದುಕೊಳ್ಳಬೇಕಾದಂಥ ಪ್ರಸಂಗ ಬಂದಾಗ ವಾಕ್ಚಿಣ್ಯಾಕ್ಕಾಗಲಿ, ಮತ್ತೊಂದಕ್ಕಾಗಲಿ ತಲೆಬಾಗತಕ್ಕಂಥಾದ್ದು ಸಾಧ್ಯವಿಲ್ಲ ಎನ್ನತಕ್ಕಂಥಾದ್ದು ನಿರ್ವಿವಾದವಾಗಿದೆಯೆಂದು ನನ್ನ ಭಾವನೆ. ಆದರೆ, ಪ್ರಾಮಾಣಿಕವಾಗಿ ಎರಡು

ಅಭಿಪ್ರಾಯಗಳು ಬರಲಿಕ್ಕೆ ಸಾಕು. ಯಾವುದೇ ಒಂದು ವಿಚಾರವಾಗಲಿ, ಎರಡು ಪ್ರಾಮಾಣಿಕವಾದಂಥ ಅನಿಸಿಕೆಗಳು, ಅಭಿಪ್ರಾಯಗಳು ಬರುವುದಕ್ಕೆ ಅವಕಾಶವಿದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಈಗ Distribution of Budget papers ಬಗ್ಗೆ Kaul and Shakder ಅವರು ಏನು ಹೇಳಿದ್ದಾರೆ ಎನ್ನತಕ್ಕಂಥಾದ್ದನ್ನು ಓದೋಣ.

(ಈ ಸಂದರ್ಭದಲ್ಲಿ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಕೆಲವರು ಗದ್ದಲ ಮಾಡುತ್ತಾ 'ಡಿ.ಎಸ್.ಎಸ್. ಜಿಂದಾಬಾದ್' ಎಂದು ಕೂಗುತ್ತಾ ಕರಪತ್ರಗಳನ್ನು ಎಸೆದರು)

I quote from Page 630.

"Distribution of budget papers: Sets of budget papers for circulation to Members are supplied to the Secretariats of both the Houses of Parliament by the Ministry concerned. In the case of the Railway Budget, the sets of Budget papers are entrusted to the Secrtetariat by the Railway Ministry as soon as the Railway Minister starts his Budget Speech and the sets are distributed to the Members from the Publication counter after the Minister has concluded his speech. The General Budget is kept a carefully guarded secret because Part-B of the Finance Minister's Speech contains Taxation proposals and the Ministry of Finance entrusts the sets to the Secretariat only when the Finance Minister starts Part-B of his speech. The sets are distributed to the Members from the Inner and Outer Lobbies of the Chamber, after the Minister's Speech is over, the Finance Bill introduced and the House is adjourned for the day."

This is the Parliamentary practice in so far as the distribution of budget papers are concerned.

Then the practice that is prevailing in this august House even before I assumed the office of the Speaker is that half an hour before.ಈ ಆಯವ್ಯಯದ ಮುಂಗಡ ಪ್ರತಿಗಳು ನನ್ನ ಸೆಕ್ರೆಟರಿಯಟ್‌ಗೆ ಮಿತ್ತ ಕಾರ್ಯಾಲಯದಿಂದ ಬರುತ್ತವೆ. ಆನಂತರ, ಮಾನ್ಯ ಹಣಕಾಸಿನ ಸಚಿವರು ತಮ್ಮ ಭಾಷಣವನ್ನು ಓದಲು ಪ್ರಾರಂಭ ಮಾಡಿದ ತಕ್ಷಣ ಆ ಪ್ರತಿಗಳನ್ನು ಹಂಚತಕ್ಕ ಸಂಪ್ರದಾಯವನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಆದುದರಿಂದ, ಸದನದ ಮಾನ್ಯ ಸದಸ್ಯರು ದಯವಿಟ್ಟು ಪರಿಗಣಿಸಬೇಕು. ಲೋಕಸಭೆಯಲ್ಲಿರತಕ್ಕಂಥ ಪ್ರಾಕ್ಟಿಸ್‌ಗೂ, ನಮ್ಮ ಸದನದಲ್ಲಿರತಕ್ಕಂಥ ಪ್ರಾಕ್ಟಿಸ್‌ಗೂ ಸ್ವಲ್ಪ ವ್ಯತ್ಯಾಸಗಳಿವೆ. ಮಾನ್ಯ ಶ್ರೀ ಕೆ.ಎಚ್. ರಂಗನಾಥರವರು ಮತ್ತು ಶ್ರೀ ಡಿ.ಬಿ. ಚಂದ್ರೇಗೌಡರು ಈ ಸ್ಥಾನದಲ್ಲಿ ಕುಳಿತಿದ್ದರು. ಈ ವ್ಯತ್ಯಾಗಳನ್ನು ಯಾರೂ ಅರ್ಥ ಮಾಡಿಕೊಳ್ಳದಿದ್ದರೂ ಇವರಿಬ್ಬರೂ ಅರ್ಥಮಾಡಿಕೊಳ್ಳುತ್ತಾರೆನ್ನುವ ವಿಶ್ವಾಸ ನನಗೆ ಇದೆ. ಇನ್ನು ನಾನು ಈ ಸಭೆಯನ್ನು ಪ್ರಾರಂಭ ಮಾಡುವುದಕ್ಕೆ ಯಾರೋ ಹೇಳಿದ್ದರು. ನನ್ನನ್ನು ಕರೆದಿದ್ದರು. ಅಥವಾ ಕರೆಯಲಿಲ್ಲ ಎನ್ನುವ ಜಿಜ್ಞಾಸೆ ಇದೆ. ಸದನದ ನಡವಳಿಕೆಯ ಟ್ರಾನ್‌ಸ್ಕ್ರಿಪ್ಟ್ ನನ್ನ ಹತ್ತಿರವಿದೆ. ಹಾಗೂ ಧ್ವನಿವರ್ಧಕದ ರೆಕಾರ್ಡಿಂಗ್ ಇದೆ. ರೆಕಾರ್ಡ್‌ನಲ್ಲಿ ಈ ರೀತಿ ಇದೆ. "ಸಭೆ ಮಧ್ಯಾಹ್ನ 2 ಗಂಟೆಗೆ ಸಮಾವೇಶಗೊಂಡಿತು. ಸನ್ಮಾನ್ಯ ಅಧ್ಯಕ್ಷರಾದ ಶ್ರೀ ಎಸ್.ಎಂ. ಕೃಷ್ಣರವರು ಉಪಸ್ಥಿತರಿದ್ದರು.

ಶ್ರೀ ಕೆ.ಎಚ್. ರಂಗನಾಥ್:- ಮಾನ್ಯ ಅಧ್ಯಕ್ಷರೇ, 2 ಗಂಟೆಗೆ ಬಜೆಟ್ ಇಲ್ಲಿ ಮಂಡನೆಯಾಗಬೇಕು."

ಶ್ರೀ ವಾಟಾಳ್ ನಾಗರಾಜ್: ಮಾನ್ಯ.....,

ಶ್ರೀ ಕೆ.ಎಚ್. ರಂಗನಾಥ್:.....

ಆದುದರಿಂದ ಸಭೆಯ ಅಧಿಕೃತ ರೆಕಾರ್ಡಿಂಗ್ ಪ್ರಕಾರ ನಾನು ಇನ್ನೂ ಅರ್ಥಮಂತ್ರಿಗಳನ್ನು ಕರೆದಿಲ್ಲ. ಈಗ ನಮ್ಮ ಕಾರ್ಯಾಲಯಕ್ಕೆ ಹಣಕಾಸು ಇಲಾಖೆಯಿಂದ 600 ಬಜೆಟ್ ಪ್ರತಿಗಳು ಬಂದಿವೆ. ಆ 600 ಬಜೆಟ್ ಪ್ರತಿಗಳಲ್ಲಿ 500 ಬಜೆಟ್ ಪ್ರತಿಗಳು ಈಗ ನಮ್ಮಲ್ಲಿ ಉಂಟು. 100 ಬಜೆಟ್ ಪ್ರತಿಗಳನ್ನು ಮೇಲ್ಮನೆಗೆ ಕಳುಹಿಸಿಕೊಡಲಾಗಿದೆ. ಅದನ್ನು ಮತ್ತೆ ಇಲ್ಲಿಗೆ ತರಿಸಿಕೊಳ್ಳಲಾಗಿದ. ಆದುದರಿಂದ, ನಾನು ನನ್ನ ಕಾರ್ಯಾಲಯದ ಪರವಾಗಿ ಸ್ಪಷ್ಟಗೊಳಿಸುತ್ತೇನೆ, ಮತ್ತೆ ಸ್ಪಷ್ಟಗೊಳಿಸುತ್ತೇನೆ. ಇದಕ್ಕೆ ಅನುಮಾನ ಬೇಕಾಗಿಲ್ಲ. 600 ಬಜೆಟ್ ಪ್ರತಿಗಳು ಈಗ ನನ್ನಲ್ಲಿದೆ. ಇದನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಆದರೆ, ಈಗ ನನ್ನ ಕೈಗೆ ಸಿಕ್ಕಿರತಕ್ಕಂಥ ಪ್ರತಿಯ

ಸೀರಿಯಲ್ ನಂ.689. ಮಾನ್ಯ ಸದಸ್ಯರು ನನಗೆ ಕಳಿಸಿರತಕ್ಕಂಥ ಪ್ರತಿಯ ಸೀರಿಯಲ್ ನಂ.689. ಇದು ಪ್ರತ್ಯೇಕ ವಿಚಾರ. ಏತಕ್ಕೆ ಇದು ಪ್ರಸ್ತಾವನೆಗೆ ಅವಕಾಶವಾಯಿತು ಎಂದರೆ, ಮಾನ್ಯ ಸಂಸದೀಯ ವ್ಯವಹಾರ ಸಚಿವರು ಹೇಳಿರುವ ಮಾತುಗಳ ಆಧಾರದ ಮೇಲೆ ಸಾಧ್ಯ. ಯಾವ ಸಚಿವಾಲಯದಿಂದಾಗಲಿ ಇಂತಹ ವಿಚಾರಗಳು ಸುಲಭವಾಗಿ ಅಥವಾ ಕಷ್ಟವಾಗಿ ಹೊರಹೊಮ್ಮುವುದಕ್ಕೆ ಸಾಧ್ಯವಿದೆ. ಎಲ್ಲದರಲ್ಲಿಯೂ ಕೂಡ ಅಂತಹ Leakproof/foolproof system ಇನ್ನೂ ನಮ್ಮ ದೇಶದಲ್ಲಿ ಮಾಡಿಲ್ಲ ಎನ್ನತಕ್ಕಂಥಾದ್ದನ್ನು ನಾವು ಅರ್ಥಮಾಡಿಕೊಳ್ಳಬೇಕು. ಈಗ ಬಜೆಟ್ ಮಂಡನೆಗೆ ಅವಕಾಶ ಕೊಡಬೇಕೇ, ಬೇಡವೇ ಎನ್ನತಕ್ಕಂಥಾದ್ದು ನನ್ನ ಮುಂದೆ ಇರತಕ್ಕ ಗುರುತರವಾದಂಥ ಪ್ರಶ್ನೆ. ಅದಕ್ಕೆ ಜವಾಬನ್ನು ಕೊಡಬೇಕಾಗಿದ್ದರೆ ಮತ್ತೆ ನಾನು ಇದಕ್ಕೆ ಶರಣಾಗಬೇಕು.

Page 259: " Leakage of budget proposals or official secrets does not form any basis for a breach of privilege: On 3rd March 1956, when notices of Adjournment Motions were given by two Members in connection with an alleged leakage of budget proposals, another Member contended that it constituted an express breach of privilege of the House. In this connection, the Speaker gave the following Ruling:

'The precedents of the United Kingdom could guide us in determining whether any breach of privilege was in fact committed in the present case. So far as I can gather, only two cases occurred in which the House of Commons took notice of leakage of the budget proposals. They are known as Thomas case and the Dalton case. In neither of these cases was the leakage treated as a breach of privilege of the House nor were the cases sent to the Committee of Privileges for enquiry. The prevailing view in the House of Commons is that until the financial proposals are placed before the House of Commons they are an official secret. A reference of the present leakage to the Committee of Privileges does not therefore arise.'

This is what the opinion, that was expressed by them on 3rd March 1956. ನಾನು ಮಾನ್ಯ ವಿರೋಧಪಕ್ಷದ ನಾಯಕರಿಗೆ ಮತ್ತು ಮಾನ್ಯಶ್ರೀ ಕೆ.ಎಚ್. ರಂಗನಾಥರವರಿಗೆ ಹೇಳುತ್ತಿದ್ದೇನೆ: 1992-93ನೇ ಸಾಲಿನ ಆಯವ್ಯಯ ಪತ್ರ ಏನಿದೆ, ಇದು ಬಹಿರಂಗವಾಗಿದೆ ಎನ್ನತಕ್ಕಂಥಾದ್ದು ಮೇಲ್ನೋಟಕ್ಕೆ ಕಂಡುಬಂದರೂ ಕೂಡ ನಮ್ಮ Kaul and Shakder ಬೌಕಟ್ಟಿನಲ್ಲಿ ಇದು ಉಲ್ಲಂಘನೆಯಾಗುವುದಿಲ್ಲ. ಆದರೆ ಒಂದು ವಿಚಾರವನ್ನು ಸರ್ಕಾರದವರು ಸೂಕ್ಷ್ಮವಾಗಿ ಪರಿಗಣಿಸಬೇಕು.

ಶ್ರೀ ಎಚ್. ಏಕಾಂತಯ್ಯ (ಚಿಕ್ಕಮಗಳೂರು):- ಮಾನ್ಯ ಅಧ್ಯಕ್ಷರೇ, ಪುಟ 631ರಲ್ಲಿ ತಾವು ಹೇಳಿದ ಮಾತಿನ ಮುಂದೆ ಇದೆ: It is an official secret.

ಒಂದು ಸಾರಿ ಸರ್ಕಾರದ ಗೌಪ್ಯತೆಗೆ ಭಂಗವಾದರೆ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ. ಅದರ ಜೊತೆಗೆ This is the Ruling of the Speaker. Though the Speaker has ruled, leakage of budget proposals may not constitute breach of privilege of the House, the Parliament has ample power to inquire into the conduct of a Minister in suitable proceedings in relation to the leakage and the circumstances in which the leakage has occurred.

ಈ ಸದನಕ್ಕೆ ಅಧಿಕಾರವಿದೆ. ಸರ್ಕಾರದ ಗೌಪ್ಯ ಈಗ ಏನು ಹೊರಗಡೆ ಬಂದಿದೆ ಅದರ ಬಗ್ಗೆ ವಿಚಾರಣೆಯಾಗಬೇಕು. ಮತ್ತು ಈ ಸದನಕ್ಕೆ ಏನು ಅಧಿಕಾರ ಇದೆ, ಸಂಬಂಧಪಟ್ಟ ಮಂತ್ರಿಗಳ ಕಾರ್ಯಾಲಯದಲ್ಲಿ ನಡವಳಿಕೆಯಿಂದ ಏನು ಈ ಒಂದು ಗೌಪ್ಯತೆ ಹೊರಗಡೆ ಬಂದಿದೆ, ಅದರ ಬಗ್ಗೆ ವಿಚಾರಣೆ ಮಾಡುವಂಥ ಅವಶ್ಯಕತೆ ಇದೆ. ಆ ರೀತಿಯಾಗಿ ಹಿಂದೆಯೂ ಸಹ ತೀರ್ಮಾನವಾಗಿದೆ.

DR. JEEVARAJ ALVA:- With all humility I would like to submit there is a clear difference that is supposed to be an alleged leakage but the leakage has occurred in your presence, that sin or whatever mistake that has been committed, in the presence of the Speaker of this House. It is not an alleged leakage. What can we ಮಾನ್ಯ ನಂಜುಂಡಸ್ವಾಮಿಯವರು ಹೇಳಿದ ಹಾಗೆ ಇದು ಎರಡು ಗಂಟೆಗೆ ಆಗಬೇಕಾಗಿತ್ತು, ಈಗ ಮೂರು ಗಂಟೆಯಾಗಿದೆ. ಅಂದರೆ ಒಂದು ಗಂಟೆ ಹೆಚ್ಚು ಆಗಿದೆ. ಆದುದರಿಂದ This is an unusual sequence. ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಆದಂಥ ಅತ್ಯಂತ ದೊಡ್ಡ ಪ್ರಮಾದ.

MR. SPEAKER:- Where does it say 'alleged leakage'? " Leakage of budget proposals before they are presented to Lok Sabha does not constitute breach of Privilege of the House. It is not alleged leakage. It is leakage.

DR. JEEVARAJ ALVA: -There are much more sanctities.

MR. SPEAKER:- I entirely agree with you.

DR. JEEVARAJ ALVA: -But there is sanctity.

MR. SPEAKER:- There is sanctity.

DR. JEEVARAJ ALVA:- If there is an iota of respect for this House, the sanctity of the House, the convention of this House, this Chief Minister should desist from presenting the Budget and resign.

MR. SPEAKER:- That is your opinion.

SHRI. R.V. DESHAPANDE:- The Hon'ble Chief Minister should resign now.

MR. SPEAKER:- That is your opinion. It is your opinion, I think, as every Member is entitled to his or her opinion on any subject. So, you were contending that something should be done. But let it also go on record, if there is a leakage and prima facie I am convinced that there is a leakage, obviously, I would certainly institute an enquiry as to how this happened and later on I will come back before the House. Now having said all this, I ಮಾನ್ಯ ಸದಸ್ಯರು ಈಗ ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತೀರಿ ಎಂದು ಭಾವಿಸಿದ್ದೇನೆ. ನಾನು ಇಷ್ಟು ಹೇಳಿದ ಮೇಲೆ ತಮ್ಮನ್ನು ನಾನು ಕನ್‌ವಿನ್ಸ್ ಮಾಡಿದ್ದೇನೆ ಎನ್ನತಕ್ಕ ಸಮಾಧಾನ ನನಗೆ ಇದೆ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ:- (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ನಾನು ಕೊನೆಯದಾಗಿ ಒಂದು ಮಾತನ್ನು ಹೇಳತಕ್ಕವೇನೆಂದರೆ, ಇದು ಹೆಚ್ಚು ಕಡಿಮೆ ಪ್ರಿವಿಲೇಜ್ ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿದ್ದೀರಿ. ಅದೇ ಸಮಯದಲ್ಲಿ ಪ್ರೆಮಾಫೇಸಿ ಲೀಕೇಜನ್ನು ಕೂಡ ತಾವು ಸ್ಯಾಂಕ್ಟಿಫೈ ಮಾಡಿದ್ದೀರಿ. I use the term 'sanctify' ಜೊತೆಗೆ ಇಂಥ ಸ್ಯಾಂಕ್ಟಿಫಿಕೇಷನ್‌ಗೆ ಮತ್ತೆ ಎನ್‌ಕ್ವೈರಿ ಏನು? There is no need for an enquiry. ನಮಗೆ ಉಳಿದಿರತಕ್ಕದ್ದು ಏನು ಮಾರ್ಗ? ಈಗ ಪ್ರಿವಿಲೇಜ್ ಆಗುವುದಿಲ್ಲ, contempt of the House ಎನ್ನುವ ಭಾವನೆ ಮಾಡಿದ್ದೇವೆ. ಲೀಕೇಜ್ ಆಗಿದೆ ಎಂದು ತಾವೇ, ಒಪ್ಪಿಕೊಂಡಿದ್ದೀರಿ. ಈ ಸದನಕ್ಕೆ ಸ್ಯಾಂಕ್ಟಿಟಿ ಇಲ್ಲವೆಂದಾದರೆ, ಎಲ್ಲಕಿಂತ ಮೇಲಾಗಿ ಈ ಬಜೆಟ್ ಭಾಷಣಕ್ಕೆ ಗೌರವವಿಲ್ಲವವೆಂದಾದರೆ, ಒಂದು ಗೌಪ್ಯವನ್ನು ಕಾಪಾಡದೆ ಇರತಕ್ಕ ಸರ್ಕಾರವಿದೆ ಎಂದಾದರೆ ಕನಿಷ್ಟಪಕ್ಷ ತಾವೇ ಹೇಳಿರತಕ್ಕ ತೀರ್ಪುಗಳೇನಿವೆ ಆ ತೀರ್ಪುಗಳನ್ನು ಆಧರಿಸಿ ಆ ತೀರ್ಪುಗಳು ಪ್ರಿವಿಲೇಜ್ ಆಗುವುದಿಲ್ಲವೆಂದು ಹೇಳಿದ್ದಾರೆ, ನಿಜ. ಆದರೆ ಅದೇ ಕಾರಣಕ್ಕಾಗಿ ಹಿಂದೆ ಸಂಬಂಧಪಟ್ಟ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆ ಎಂಬುದನ್ನು ಗಮನಿಸಬೇಕಾಗಿರ ತಕ್ಕಂಥ ಅಂಶವಾಗಿದೆ. ಆದುದರಿಂದ ನಾನು ಗೌರವಪೂರ್ವಕವಾಗಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಈ ತಪ್ಪನ್ನು ಒಪ್ಪಿಕೊಂಡು ರಾಜೀನಾಮೆ ಕೊಡಲು ಸಿದ್ದರಾಗಬೇಕು. That is the ruling. Though the ruling is not here, that is the implied meaning of the Ruling. I would appeal to him to save ಈ ಒಂದು ತಮ್ಮದೇ ಆದ ಪಕ್ಷದ, ಈ ಸದನದ, ನಮ್ಮ ಸದಸ್ಯರ ಗೌರವವನ್ನು ಕಾಪಾಡಲು ತಾವು ಈ ಒಂದು ದೊಡ್ಡ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಅಧ್ಯಕ್ಷರೆ, ಈ ಸಭೆಯ ಗೌರವವನ್ನು ಕಾಪಾಡತಕ್ಕದ್ದು ತಮಗೆ ಸೇರಿರತಕ್ಕಂಥದ್ದು. ಎರಡು ಗಂಟೆಗೆ ಈ ಸದನದಲ್ಲಿ ಈ ವರ್ಷದ ಆಯವ್ಯಯವನ್ನು ಮಂಡಿಸಬೇಕೆಂದು ಹೇಳಿ ಅವರು ಕಾಲವನ್ನು ನಿರ್ಧಾರ ಮಾಡಿಕೊಂಡು ಬಂದು, ಬಹಳ ಒಳ್ಳೆಯ ಕಾಲ ಇದು ಈ ಸಂಧರ್ಭದಲ್ಲಿ ಇದನ್ನು ಮಂಡನೆ ಮಾಡಬೇಕೆಂದು ಅವರು ಬಂದಿದ್ದಾರೆ. ಆ ಒಂದು ಕಾಲ ಈಗ ಮೀರಿದೆ. ಈಗ ಶುಭಮುಹೂರ್ತ ಹೋಗಿ ರಾಹುಕಾಲ ಬಂದಿದೆ. ಈ ರಾಜ್ಯದ ನಾಲ್ಕು ಕೋಟಿ ಜನರ ಜೀವನದ ಭದ್ರತೆ, ಆದರ್ಶ, ಅಭಿಮಾನ, ಅಭಿವೃದ್ಧಿ ಎಲ್ಲವನ್ನೂ ನಾವು ಚಿಂತನೆ ಮಾಡಿ ಆ ಜನತೆಗೆ ಒಳ್ಳೆಯದಾಗಲಿ ಎನ್ನುವ ಉದ್ದೇಶದಿಂದ ಇಲ್ಲಿ ಮಂಡಿಸತಕ್ಕದ್ದು, ಇದು ನಮ್ಮೆಲ್ಲರ ಉದ್ದೇಶವಾಗಿದೆ. ಈಗ ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುವುದೇನೆಂದರೆ.....

(ಗೊಂದಲ)

ಅಧ್ಯಕ್ಷರು:- ನಾಗಮಾರಪಲ್ಲಿಯವರೆ, ನಿಮಗ ರಾಹುಕಾಲದ ಬಗ್ಗೆ ಕಾಳಜಿ ಬೇಡ. ಏಕೆಂದರೆ, ಪ್ರಾರಂಭವಾಗಿದ್ದು ಎರಡು ಗಂಟೆಗೆ.

ಶ್ರೀ ವಾಟಾಳ್ ನಾಗರಾಜ್:- ನಾನು ಇಲ್ಲಿ ರಾಹುಕಾಲದ ಬಗ್ಗೆಯಾಗಲಿ, ಯಮಗಂಡ ಕಾಲದ ಬಗ್ಗೆಯಾಗಲಿ ಮಾತನಾಡುತ್ತಿಲ್ಲ.

ಅಧ್ಯಕ್ಷರು:- ನಿಮಗೆ ಯಮಗಂಡ ಕಾಲದ ಬಗ್ಗೆ ಬೇಕಾದರೆ ಹೇಳುತ್ತೇನೆ, ಮಾನ್ಯ ರಮೇಶ್‌ರವರೆ, ರಾಹುಕಾಲ ಮತ್ತು ಯಮಗಂಡ ಕಾಲದ ಬಗ್ಗೆ ವ್ಯಾಖ್ಯಾನ ಏನಾದರೂ ಇದ್ದರೆ ಹೇಳಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್:- ಇಲ್ಲಿ ನಾನು ಇದರ ಪೂರ್ವಾಪರ ವಿಚಾರವನ್ನು ಏಕೆ ಹೇಳಿದೆ ಎಂದರೆ, ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯವನ್ನು ಮಂಡಿಸಬೇಕಾದರೆ ಎರಡು ಗಂಟೆ ಎಂದು ನಿರ್ಧಾರ ಮಾಡಬೇಕಾದರೆ ಕೆಲವು ವಿಚಾರಗಳಿವೆ, ಅದು ಅವರಿಗೆ ಬಿಟ್ಟಿದ್ದು, ನಾನು ಅದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಆದರೆ ಈವತ್ತಿನ ದಿವಸ ಈ ಒಂದು ಆಯವ್ಯಯ ಜಗಜ್ಜಾಹೀರಾಗಿ ಇಡೀ ರಾಜ್ಯದ ಜನತೆಗೆ ತಲುಪಿದ್ದೆ. ಆದುದರಿಂದ ನಾವು ಮೈಲಿಗೆಯಾಗಿರತಕ್ಕ ಇವರ ಭಾಷಣವನ್ನು ಕೇಳಿಕೊಂಡು ಕುಳಿತುಕೊಳ್ಳುವುದಕ್ಕೆ ನಾನು ತಯ್ಯಾರಾಗಿಲ್ಲ. ಅವರು ಭಾಷಣ ಪ್ರಾರಂಭ ಮಾಡಿದರೆ ನಾವು ಸಭೆಯನ್ನು ತ್ಯಾಗ ಮಾಡಿ ಹೋಗಬೇಕಾಗುತ್ತದೆ.

ಶ್ರೀ ಗೋಪಾಲ ಮುಕುಂದ ಕಾನಡೆ:- ಮಾನ್ಯ ಅಧ್ಯಕ್ಷರೇ, ನಮ್ಮ ಬಜೆಟ್ ಏನು ಇದೆ ಎಂದು ಜನರಿಗೆ ತಿಳಿಸಲು ನಾವು ಇಲ್ಲಿ ಕುಳಿತಿದ್ದೇವೆ. ಈ ಬಜೆಟಿನಲ್ಲಿ ಏನು ಇದೆ ಎನ್ನುವುದನ್ನು ಹೊರಗಾಣಿಸುವುದರೊಳಗೆ ವಿರೋಧ ಪಕ್ಷದವರು ಹೆಂಡತಿ ಮೇಲೆ ಇಷ್ಟವಿರಲಿಲ್ಲ ಅದಕ್ಕೆ ಮೊಸರಿನಲ್ಲಿ ಕಲ್ಲು ಸಿಕ್ಕಿದಂತೆ ನಾಟಕಮಾಡಿ ನಮ್ಮ ಒಳ್ಳೆಯ ಬಜೆಟನ್ನು ಹಾಳು ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆದುದರಿಂದ ತಾವು ಈ ಬಜೆಟನ್ನು ಮಂಡನೆ ಮಾಡಲು ಅವಕಾಶ ಕೊಡಬೇಕೆಂದು ಕರ್ನಾಟಕ ರಾಜ್ಯದ ಜನತೆಯ ಬಗ್ಗೆ ನಾನು ಕೈಮುಗಿದು ಕೇಳಿಕೊಂಡು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ:- ಮಾನ್ಯ ಅಧ್ಯಕ್ಷರೆ, ಬಜೆಟ್ ಲೀಕೇಜ್ ವಿಚಾರದಲ್ಲಿ ಚರ್ಚೆಯಾಗತಕ್ಕದ್ದು ಇದು ಮೊಟ್ಟಮೊದಲನೆಯಬಾರಿ ಏನಲ್ಲ, ನಮ್ಮ ಸಂಸದೀಯ ವ್ಯವಹಾರದಲ್ಲಿ, ರಾಷ್ಟ್ರದಲ್ಲಿ ಹಿಂದೆ ಪಾರ್ಲಿಮೆಂಟಿನಲ್ಲಿ ಎಷ್ಟೋ ಸಾರಿ ಬಜೆಟ್ ಲೀಕ್‌ಔಟ್ ಆಗಿದೆ, ಮತ್ತೊಂದು ಆಗಿದೆ ಎನ್ನತಕ್ಕಂಥ ವಿಚಾರ ಇದೆ. ಮಾನ್ಯ ಸದಸ್ಯರಿಗೆ ಅವರು ತಿಳಿದುಕೊಂಡಿರತಕ್ಕ ಕೆಲವು ವಿಷಯಗಳ ಆಧಾರದ ಮೇಲೆ ಹೇಳತಕ್ಕಂಥ ಕಾರಣ ಇದೆ. ಇದು ಪಾರ್ಲಿಮೆಂಟ್‌ನಲ್ಲಾಗಲಿ ಮತ್ತೊಂದೆಡೆಯಾಗಲಿ ಬಂದಿರಬಹುದು. ಆದರೆ ಆ ವಿಷಯವನ್ನು ನೋಡಿಯಾದ ಮೇಲೂ ಕೂಡ ಆ ರೀತಿ ಲೀಕ್ ಆಗಿಲ್ಲ ಎನ್ನತಕ್ಕ ವಿಚಾರದ ಮೇಲೆ ಬೇಕಾದಷ್ಟು ರೂಲಿಂಗ್ ಕೂಡ ಬಂದಿದೆ. ಇದನ್ನು ನಾವು ಎಷ್ಟೋ ಸಲ ಓದಿ ತಿಳಿದುಕೊಳ್ಳುತ್ತೇವೆ. ಇದು ನಮ್ಮ ವ್ಯವಹಾರದಲ್ಲಿ ಕೂಡ ಇದೆ.

ಈಗ ಎಷ್ಟೊ ಕವಿಯ ವಿಚಾರಗಳನ್ನು ಮಾನ್ಯ ಅಧ್ಯಕ್ಷರು ಕೇಳಿದ್ದಾರೆ. ಅದು ಹೇಗಾಯಿತು? ಏನಾಯಿತು? ಒಂದು ವೇಳೆ ಅದು ಆಗಿದ್ದರೆ, ತಾವು ಹೇಳಿದಂತೆ ಅದ ಲೀಕ್ ಔಟ್ ಆಗಿದ್ದರೆ ಎಲ್ಲಿ ಆಗಿದೆ ಹೊರಗಡೆಯಾಗಿದೆಯೇ? ಎಲ್ಲಿ ಆಗಿದೆ ಏನಾಗಿದೆ? ಎನ್ನತಕ್ಕ ವಿಚಾರ ನೋಡಬೇಕಾಗಿದೆ? ನಾನು ತಮ್ಮಲ್ಲಿ ಆಪೀಲ್ ಮಾಡಿಕೊಳ್ಳುವುದೇನೆಂದರೆ, ಲೀಕ್‌ಔಟ್ ಆಗಿದೆಯೇ ಆಥವಾ ಇಲ್ಲವೋ ಎನ್ನತಕ್ಕದು ಕೂಡ ಇವತ್ತು ಆ ಬುಕ್ಕಿನಲ್ಲಿದೆ. ಬಹುಶಃ ಅದು ನಮ್ಮ ಬಳಿ ಇರತಕ್ಕ ಬುಕ್ಕೊ ಮತ್ತೊಂದು ಬುಕ್ಕೊ ಅದರಲ್ಲಿ ಮೃತ್ಯಾಸವಿರಬಹುದು ಆಥವಾ ಇಲ್ಲದಿರಬಹುದು, ಅದರ ಬಗ್ಗೆ ನಮಗೆ ಅದು ಇನ್ನೂ ಗೊತ್ತಿಲ್ಲ.

ಏಕೆಂದರೆ, I have not seen that. ಅದು ಏನೇ ಇರಲಿ, It is a matter for enquiry.

ನಾನು ತಮ್ಮ ಮುಖಾಂತರ ಮಾನ್ಯ ವಿರೋಧಪಕ್ಷದ ನಾಯಕರಲ್ಲಿ, ಮಾನ್ಯ ಸದಸ್ಯರಲ್ಲಿ ಆಪೀಲ್ ಮಾಡುವುದು ಇಷ್ಟೆ. ವಿಷಯ ವಿನಿಮಯ ಕೂಡ ಮಾನ್ಯ ಸಭಾಧ್ಯಕ್ಷರು ಹೇಳಿದ್ದಾರೆ, ನಾವು ವಿಚಾರವನ್ನು ತಿಳಿಸಿದ್ದೇವೆ. ಅಂತಿಮ ತೀರ್ಮಾನವನ್ನು ಆಮೇಗೆ ಬಿಡೋಣ ಎನ್ನುವಂತಹ ಮಾತನ್ನು ನಾನು ಹೇಳಿದೇನೆ. ಈಗ ತಮ್ಮ ಮುಖಾಂತರ ನಾನು ವಿನಂತಿ ಮಾಡುತ್ತಿದ್ದೇನೆ. ಬಜೆಟ್ ಕರ್ನಾಟಕ ರಾಜ್ಯದ ಹಿತದೃಷ್ಟಿಯಿಂದ ನಮ್ಮನ್ನು ನಿಮ್ಮನ್ನು ಒಳಗೊಂಡಂತೆ ಇವತ್ತು ನಾವು ಮಾಡತಕ್ಕಂತ ಕರ್ತವ್ಯವಿದೆ. ಇದರ ಜವಾಬ್ದಾರಿ ನಿರ್ವಹಣೆ ಮಾಡತಕ್ಕಂಥದ್ದು ಸ್ಪಷ್ಟವಾಗಿದೆ. ಅದನ್ನು ನಾನು ಸ್ಪಷ್ಟಪಡಿಸುತ್ತೇನೆ. ಮತ್ತೊಂದು ಸಾರಿ ತಮ್ಮ ಅನುಮತಿ ಪಡೆದು ಸರ್ಕಾರ ಯಾವುದೇ ಸಂದರ್ಭದಲ್ಲೂ ಕೂಡ ಇದರ ಗೌಪ್ಯತ್ವನ್ನ ಕಾಪಾಡಿಕೊಂಡು ಬಂದಿದೆ. ಲೀಕ್‌ಔಟ್ ಮಾಡುವುದಕ್ಕೆ ನಾವು ಬಿಟ್ಟಿಲ್ಲ. Even name I stand by my statement. ತಮಗೆ ಅನುಮಾನ ಬೇಕಾಗಿಲ್ಲ. ಏಕೆಂದರೆ ಸ್ವಲ್ಪ ಲೀಕ್‌ಔಟ್ ಆದರೂ ಕೂಡ ಏನಾಗುತ್ತದೆಯೆಂದು ಮತ್ತು ಗೌಪ್ಯದ ವಿಚಾರದ ಬಗ್ಗೆ ನಾನು ನಮ್ಮ ಅಧಿಕಾರಿಗಳಿಗೆ ಅಜ್ಞೆ ಮಾಡಿದ್ದೇನೆ. ಅಧಿಕಾರಿಗಳು ಕೂಡ ಅದನ್ನು ಬಹಳ ಒಳ್ಳೆಯ ರೀತಿಯಲ್ಲಿ ಪಾಲಿಸಿಕೊಂಡು ಬಂದಿದ್ದಾರೆ. ಕೆಲವೊಂದು ವಿಚಾರಗಳು ನನ್ನ ಗಮನಕ್ಕೆ ಈಗ ತಾನೆ ಬಂತು. ನಾನು ಪ್ರತಿಯೊಂದು ಸಾರಿ ಹೇಳುತ್ತಾ ಹೋದರೆ ಅದು ಆಗುವುದಿಲ್ಲ, ಅದರಲ್ಲಿ ಏನೇನು ತಪ್ಪಾಗಿಲ್ಲ. ಅದು ತಮ್ಮ ಗಮನಕ್ಕೆ ಕೂಡ ಮುಂದೆ ಬರುತ್ತದೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಎಲ್ಲಾ ಪಕ್ಷದ ನಾಯಕರು ಸದಸ್ಯರು ತಿಳಿದುಕೊಳ್ಳಲಿ ಅದರಲ್ಲಿ ಏನೇನೂ ಆಗಿಲ್ಲ. ಅದರ ಬಗ್ಗೆ ತಮಗೆ ಅನುಮಾನಬೇಕಾಗಿಲ್ಲ. ಈಗ ನಾನು ತಮ್ಮಲ್ಲಿ ಆಪೀಲ್ ಮಾಡುತ್ತಿದ್ದೇನೆ. ತಾವು ಈಗ ಬಜೆಟ್ ಮಂಡನೆ ಮಾಡಾವುದಕ್ಕೆ ನನಗೆ ಅನುಮತಿಯನ್ನು ಕೊಡಬೇಕು. (ಗೊಂದಲ)

ಅಧ್ಯಕ್ಷರು:- ಅಯವ್ಯಯ ಪತ್ರದ ಭಾಷಣದ ಪ್ರತಿಯನ್ನು ನೋಟೀಸ್ ಆಫೀಸ್‌ನಲ್ಲಿ ಕೊಡಲು ವ್ಯವಸ್ಥೆ ಮಾಡಲಾಗಿದೆ. ಪ್ರತಿಯೊಬ್ಬ ಮಾನ್ಯ ಸದಸ್ಯರು ಕೂಡ ತಮ್ಮ ಹೆಸರಿನ ಮುಂದೆ ಹಸ್ತಾಕ್ಷರ ಮಾಡಿ ತಾವು ತಪ್ಪದೆ ದಯವಾಡಿ ಅಯವ್ಯಯ ಭಾಷಣದ ಪ್ರತಿಯನ್ನು ಪಡೆದುಕೊಳ್ಳಬೇಕು. ಇನ್ನು ಈ ಕೆಳಕಂಡವರು ಶ್ರೀ ಪಿ. ತಿಮ್ಮಯ್ಯ ಸನ್ ಆಫ್ ಲೇಟ್ ಪೂಜಾ ವೆಂಕಟಯ್ಯ, ಶ್ರೀ ಗಂಗಚಿನ್ನಯ್ಯ ಸನ್ ಆಫ್ ಬಿಲ್ಲಯ್ಯ, ಶ್ರೀ ವೆಂಕಟೇಶ್ ಸನ್ ಆಫ್ ಲೇಟ್ ಷಣ್ಮುಗಯ್ಯ– ಇವರೆಲ್ಲರೂ ದಲಿತ ಸಂಘರ್ಷ ಸಮಿತಿಯವರು. ಇವರು ಸದನದಲ್ಲಿ 2-45 ಗಂಟೆ ಸಮಯದಲ್ಲಿ ಪ್ರೇಕ್ಷಕರ ಗ್ಯಾಲರಿಯಿಂದ ಘೋಷಣೆಗಳನ್ನು ಕೂಗಿ ಅಲ್ಲಿದ್ದ ಮಾರ್ಷಲ್ ಅಂಡ್ ವಾರ್ಡ್‌ನವರು ಅವರನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಅವರು ಸದನಕ್ಕೆ ತೀವ್ರ ಸ್ವರೂಪದ ಅಪರಾಧವನ್ನು ಮಾಡಿದ್ದಾರೆ. ಆದ್ದರಿಂದ ಅವರೆಲ್ಲರನ್ನೂ 3 ದಿವಸಗಳ ಕಾಲ ಕಾರಾಗೃಹವಾಸವನ್ನು ವಿಧಿಸಲು ನಾನು ತೀರ್ಮಾನಿಸಿದ್ದೇನೆ. ಆದ್ದರಿಂದ ಇನ್ನು ಮುಂದೆ ಇಂತಹ ಘಟನೆಗಳಿಗೆ ಪ್ರಚೋದಕವಾದ ವಾತಾವರಣ ನಿರ್ಮಾಣವಾಗದೆ ಇರಲಿ ಎನ್ನುವ ದೃಷ್ಟಿಯಿಂದ ಈ ಶಿಕ್ಷೆಯನ್ನು ನಾನು ವಿಧಿಸಿದ್ದೇನೆ. ಈ ಬೇಲ್ಡಂಡ ಮೂವರು ಮಹಿಳೆಯರುಗಳಿಗೆ ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳ ಆಫೀಸ್‌ನಿಂದ ಪಾಸ್‌ಗಳನ್ನು ಕೊಡಲಾಗಿದೆ. ಆದ್ದರಿಂದ ಮತ್ತೊಮ್ಮೆ ನಾನು ಈಗಾಗಲೇ ಸೂಚಿಸಿರುವಂತೆ ಮಾನ್ಯ ಸದಸ್ಯರುಗಳು ತಾವು ತಮ್ಮ ಪಾಸ್‌ಗಳನ್ನು ಕೊಡತಕ್ಕಂಥ ಸಂದರ್ಭದಲ್ಲಿ ದಯವಾಡಿ ತಮ್ಮ ವೈಯಕ್ತಿಕ ಜವಾಬ್ದಾರಿಯ ಹನ್ನೆಲೆಯಲ್ಲಿ ಈ ಪಾಸ್‌ಗಳನ್ನು ಕೊಡುವಿಕೆಯು ನಾನು ಸೂಚನೆ ಮಾಡುತ್ತೇನೆ. ಈಗ ಸದನ ಮುಂದಿವರಿಯು ನಾಳೆ ಬೆಳಗ್ಗೆ 11 -00 ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(ಸದನವು 4 ಗಂಟೆ 55 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 4ನೇ ಮಾರ್ಚ್ ಮಾಹೆ 1992ರ ಬೆಳಗ್ಗೆ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಳ್ಳಲು ನಿರ್ಧರಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಆಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)